ಕೊರವಂಜಿ



Koravanji

ಮೇ

೧೯೫೦

ಸಂಪಾದಕರು
ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಅ. ರಾ. ಸೇ.
ಶ್ರೀ॥ ಶ್ರೀರಂಗ
ಶ್ರೀ॥ ರಾ[illegible]
ಶ್ರೀ॥ ಟಿ. ನ. ನರಹರಿ
ಶ್ರೀ॥ ಜೂನು
ಶ್ರೀ॥ ರಾಂಸ್ವಾಮಿ
ಶ್ರೀ॥ ಪ್ರಕಾಶ್
ಶ್ರೀ॥ ಹಾ. ರಾ.
ಶ್ರೀ॥ ದಾಶರಥಿ,ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಕೊರವಂಜಿ

A. ANANTHIAH.

ಸಂಪುಟ ೨೩ ಮೇ ೧೯೬೦ ಸಂಚಿಕೆ ೨

ಕುಹಕಿಡಿಗಳು

ನಾಲಿಗೆ ಬಡಬಡಿಸುವಾಗ ಮಿದುಳು ಮೌನವಾಗಿಯೇ ಇರುತ್ತೇನೋ ?

—ಸಂಧಾನಗಳ ಸಮಯದಲ್ಲಿ ಕೂಡ !—

* * * *

ದಕ್ಷಿಣ ಭಾರತದ ಸಂಸ್ಥಾನಗಳ ಗಡಿ ವಿವಾದಗಳನ್ನೂ ಕಂಡ World Bank ಸದಸ್ಯರೊಬ್ಬರು "ಇವರೆಲ್ಲಾ ಒಂದು ಸಂಸಾರದವರಿದ್ದ ಹಾಗೆ ಏಕಿರುಲ್ಲ" ಎಂದರಂತೆ.

—"ಇದ್ದಾರೆ ಸ್ವಾಮಿ ! ಒಂದು ಸಂಸಾರದವರ ಹಾಗೇ ಇದ್ದಾರೆ ! ನಮ್ಮ ಸಂಸಾರಗಳು ಹಾಗೇ !

* * * *

ಪ್ರೈಸ್ ಬಾಂಡ್ಸ್ ವ್ಯವಸ್ಥೆಯಲ್ಲಿ ಜೂಜಾಟದ ಮ್ಹಾತೇ ಇಲ್ಲ. ಅಸಲು ಸುರಕ್ಷಿತವಾಗಿಯೇ ಇರುತ್ತೆ, ಎಂದು ಅರ್ಥಸಚಿವರ ಅಂಬೋಣ.

—ದಿಟ – ಅಸಿಲಿಗೆ ಮೋಸವಿಲ್ಲದ್ದರಿಂದ, ಬರಬಹುದಾದ ಬಡ್ಡಿ ಹಣದಲ್ಲಿ ಜೂಜಾಡುತ್ತೇವೆ ಅಷ್ಟೆ !—ಧರ್ಮರಾಯನಿಗಿಂತ ಜಾಣರು !! ಕರ್ಮರಾಯರು ನಾವು !!!

* * * *

ಸುಪ್ರಸಿದ್ಧ ಟೆನ್ನಿಸ್ ಆಟಗಾರರೊಬ್ಬರು ಇನ್ನೆರಡು ದಿನಗಳಲ್ಲಿ ಮದುವೆ ಯಾಗುವರಂತೆ.

—ಇನ್ನುಮೇಲೆ ಅವರ ಆಟ ಯಥಾಪ್ರಕಾರ ಒನ್ ಲವ್, ಟು ಲವ್ ಅಂತಲೇ ಆರಂಭ !!

ಮೊನ್ನೆ ಡಾರ್ಬಿ ಕುದುರೆ ಜೂಜಿನಲ್ಲಿ, ಪಾಶ್ಚಾತ್ಯರೆಲ್ಲಾ ಷರ್ಟುಗಳನ್ನು ಜೂಜಾಡಿದಾಗ, ಭಾರತದ ಪ್ರತಿನಿಧಿಗಳು ಟೋಪಿಗಳನ್ನೇ ಪಣವಾಗಿಟ್ಟರೆಂಬುದು ಶುದ್ಧ ಕುಹಕ !

* * * *

ಆಸ್ಪತ್ರೆಗಳಲ್ಲಿ ಈಗೀಗ ಯಾರೂ ಮೂರ್ಛೆ ಹೋಗುವುದಿಲ್ಲವಂತೆ.

—ಈಗ ಬ್ರಾಂದಿಯ ಬದಲು ಬೇರೆ ಕೃತಕ ಕಹಿ ಔಷಧಿ ಕುಡಿಸುತ್ತಾರಂತೆ, ಸುಸ್ವಾದವಂಗೆ !

* * * *

ಚೌ ಎನ್ ಲೈ ರವರು ಸಂಭಾಷಣೆ ಮಾಡುವಾಗ, ಏನಾದರೂ ಅಪ್ಪಿತಪ್ಪಿ ಮಾತಾಡಿದರೆ ತಕ್ಷಣ ಸೀಟಿ ಹೊಡೆಯುತ್ತಾರಂತೆ—ಭಾಷಾಂತರಕಾರನಿಗೆ ಕೇಳಿಸುವಂತೆ.

—ಅಂದಮೇಲೆ ? ನಮ್ಮ ಫುಟ್‌ಬಾಲ್ ಪಂದ್ಯಕ್ಕೆ ಅಂಪೈರ್ ಮಾಡಬಹುದು!

* * * *

ಅಂಗೈಯಿನ ಚರ್ಮವು ಕಣ್ಣುರೆಪ್ಪೆಯ ಚರ್ಮಕ್ಕಿಂತ 26 ರಷ್ಟು ದಪ್ಪವಾಗಿರುತ್ತದೆಂದು ಶಸ್ತ್ರವೈದ್ಯ ಪ್ರವೀಣರೊಬ್ಬರು ಹೇಳಿದ್ದಾರೆ.

—ಆದರೂ ಕಣ್ಣಿಗೆ ಕಾಣಿಸದೆ ಇದ್ದ, ಹಿಂಗೈ ಸೇರಿದ ಹಣ ಇಷ್ಟೇ ಎಂದು ಎಷ್ಟೋ ಅಧಿಕಾರಿಗಳಿಗೆ ಗೊತ್ತಾಗುತ್ತೆ !!

* * * *

Domestic Science B.Sc. ಪದವೀಧರೆ ಸೊಸೆಯು, ಚಿಗುಳಿ ಉಂಡೆ ಮಾಡುವ ವಿಧಾನವನ್ನು ಅತ್ತೆಮ್ಮನವರಿಗೆ ಕಲಿಸಿ ಕೊಡಲು ಆರಂಭಿಸಿದ್ದಾಳಂತೆ.

* * * *

ಬಡ್ಜೆಟ್ ಮಂಡಿಸಿ, ತೆರಿಗೆ ಸೂಚಿಸಿ, ತಿರುಗಿ ಅದನ್ನು ಸಚಿವರು ಕೆಲವೆಡೆ ಕಡಿಮೆ ಮಾಡಿದ ಕಾರಣ, ಹಲವರು ಲಕ್ಷಾಧಿಕಾರಿಗಳಾದರಂತೆ.

— ಅಂಥವರಿಗೂ ಅರ್ಥ ಸಚಿವರಿಗೂ ಸಂಬಂಧವಿಲ್ಲವಂತೆ !

* * * *

ಸ್ವಂತ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳದೆ ಸಮತಾ ಸಮಾಜವನ್ನು ಏರ್ಪಡಿಸಬಹುದು. (ಪತ್ರಿಕೆ)

—ಹೌದಲ್ಲೋ ! ತಮ್ಮಾ ! ಹೆಂಡತೀನ ಬಿಡದೆ ಬ್ರಹ್ಮಚರ್ಯ ಉಳಿಸಿಕೋಬಹುದಲ್ಲ ಮತ್ತೆ ! ಅಂದರಂತೆ ನಮ್ಮ ಉತ್ತರ ಭಾಷಾ ಬಾಂಧವರು !

* * * *

ಹೀಗೂ ಆಗಿತ್ತಂತೆ

—:o:—

ಕವಿ ಸಮ್ಮೇಳನದಲ್ಲಿ ಕವಿತೆಯನ್ನು ಮುಗಿಸುವ ಹೊತ್ತಿಗೆ ಒಬ್ಬೊಬ್ಬ ಕವಿಯ ಮೇಲೂ ಕಾರ್ಯದರ್ಶಿಯು ಪನ್ನೀರ್‌ದಾನಿ ಹಿಡಿದು ಪನ್ನೀರು ಚುಮುಕಿಸುತ್ತಿದ್ದನಂತೆ.

ಅಧ್ಯಕ್ಷತೆಯನ್ನು ವಹಿಸಿದ್ದ ರಾಜಕಾರಣಿಯು ಕಾರ್ಯದರ್ಶಿಯನ್ನು ಕರೆದು, ಎಲ್ಲ ಕವಿಗಳ ಮೇಲೆ ಕಡೆಯದಾಗಿ ಪನ್ನೀರು ಚುಂಕಿಸಬಾರದೇ? ಎಂದು ಹೇಳಿದನಂತೆ.

“ ಹಾಗಲ್ಲ[illegible]ರಾಯರೇ! ಅವರವರು ತಂತಮ್ಮ ಕವಿತೆಗಳನ್ನು ಹಾಡಿ ಮುಗಿಸುವಾಗ, ಕವಿತೆಯಲ್ಲಿ ಕಾವಿದ್ದರೆ, ಇವರ ಕಾವೂ ಏರಿರುತ್ತೆ ಪನ್ನೀರು ಚುಂಕಿಸಿದರೆ, ಹನಿಗಳೆಲ್ಲಾ ಯಾವ ಕವಿಯ ಮೇಲೆ ಚುರು ಚುರು ಎಂದು ಕುದಿಯುತ್ತೋ, ಆ ಕವಿಯನ್ನೇ ಮುಂದಿನ ವರ್ಷ ರಾಷ್ಟ್ರಕವಿ ಎಂದು ಸನ್ಮಾನಿಸಲಾಗುತ್ತೆ. ಎಂದು ಕಾರ್ಯದರ್ಶಿಯು ವಿವರಿಸಿ ಹೇಳಿ, ಸರ್ಕಾರದವರ ಸೂಚನೆಯಂತೆ ಈ ರೀತಿ ಮಾಡಲಾಗುತ್ತಿದೆಯೆಂದೂ ಹೇಳಿದನಂತೆ.

ಮುಂಬಂದ ವರ್ಷ ರಾಷ್ಟ್ರ ಕವಿಯೆಂದು ಬಹುಮಾನಿತನಾದವನಿಗೆ, ಕವಿ ಸಮ್ಮೇಳದಂದು ಮಲೆರಿಯಾ ಜ್ವರ ಜಡಿದಿತ್ತೆಂದೂ ಆತ ನಡುಗುತ್ತಾ ಹಾಡಲು ಶುರುಮಾಡಿ, ಮುಗಿಸುವ ವೇಳೆಗೆ ಕೆಂಡಾಮುಂಡಲ ಜ್ವರ ಬಂದಿತ್ತೆಂದೂ ಸುಮಾರು ದಿವಸಗಳಾದ ಮೇಲೆ ತಿಳಿಯಬಂದಿತಂತೆ.

*   *   *   *

ಸುರಪತಿಯ ಒಡ್ಡೋಲಗದಲ್ಲಿ ರಂಭೆ ಬಲು ರಸವತ್ತಾಗಿ ನಾಚು ನಡೆಸಿದಳಂತೆ. ಸಾವಿರ ಕಣ್ಣಿಟ್ಟುಕೊಂಡು ನೋಡಿದ ಇಂದ್ರ ಆ ಸಂಜೆ ಊಟವಾದ ಮೇಲೆ ರಂಭೆಯ ಮನೆಯ ಕಡೆ ವಾಕಿಂಗ್ ಹೋದನಂತೆ.

ಬಾಗಿಲ ಹತ್ತಿರ ಸಿಡಿಲು ಬಡಿದಂತಾದಾಗ ರಂಭೆ ಒಳಗಿಂದ ಅವಸರ ಅವಸರವಾಗಿ ಬಂದು ಬಾಗಿಲು ತೆಗೆದಳಂತೆ. ಬಾಗಿಲು ಬಳಿ ಸಿಡಿಲು ಬಡಿದಂತಾದರೆ, ಇಂದ್ರನು ವಾಕಿಂಗ್ ಸ್ಟಿಕ್ಕಿನಿಂದ ಬಾಗಿಲನ್ನು ತಟ್ಟುತ್ತಾನೆ ಅಂತ ಅವಳಿಗೆ ಗೊತ್ತಿತ್ತಂತೆ.

" ಷೋಡಶ ಕಲೆಗಳಿಂದ ಕೂಡಿತ್ತು ಈ ಸಂಧ್ಯಾ ನೃತ್ಯ ನಿನ್ನದು " ಎಂದನಂತೆ ಇಂದ್ರ.

" ಸಾವಿರ ರೆಪ್ಪೆಗಳಲ್ಲಿ ಒಂದೂ ಬಡಿಯದಿದ್ದಾಗ, ಹಾಗೆ ನೀವು ಈಗ ಅಂತೀರಿ ಅಂತ ನನಗೆ ಗೊತ್ತಿತ್ತು " ಎಂದು ರಂಭೆ ಪಲುಕಿದಳಂತೆ.

" ನಿನ್ನೆ ಭೂಲೋಕದಿಂದ ಮಹಾ ತಪಸ್ವಿಯೊಬ್ಬ ಸ್ವರ್ಗವಾಸಕ್ಕೆಂದು ಬಂದನೆಂದು ವರದಿಯಾಗಿತ್ತು. ಅವನನ್ನು ಕಾಣಲಿಲ್ಲ. ನಿನ್ನ ಮನೆಗೇನಾದರೂ ಬಂದಿದ್ದನೇನೋ ಅಂತ ಕೇಳಲು ಬಂದೆ." ಎಂದನಂತೆ ಇಂದ್ರ.

" ಯಾರು ಬಂದವರು ಯಾರು ಹೋದವರು ಅಂತ ಹಾಜರಿ ಪಟ್ಟಿಯನ್ನು ನಾನೇನೂ ಇಡುಲ್ಲ ಅಂತ ಪ್ರಭುಗಳಿಗೂ ತಿಳಿದಿದೆಯಲ್ಲವೇ " ಎಂದು ರಂಭೆ ಕೊಂಕಿದಳಂತೆ.

" ಹಾಗೇನಾದರೂ ಹಾಜರಿಪಟ್ಟಿ ಇಟ್ಟು, ಅದು ಅಕಸ್ಮಾತ್ ಶಚಿದೇವಿ ಕೈಗೆ ಬಿದ್ದರೆ ಒಳ್ಳೆಯದಲ್ಲ ಅಲ್ಲವೇ " ಎಂದು ಹೇಳಿ ರಂಭೆ ಹುಷಾರು ಕ್ರಮವನ್ನು ಕೈಗೊಂಡಳಂತೆ.

" ಗೊತ್ತು ! ರಂಭೆ ! ನೀ ಬಾಳ ಶಹಣೆ ಇದ್ದೀ ! ನಡೆದು ಬಂದು ಕಾಲು ನೋಯುತ್ತಿದೆ." ಎಂದು ಇಂದ್ರ ಹೇಳಿದನಂತೆ.

" ಪ್ರಭೋ ! ಮಂಚದ ಮೇಲೆ ಮಲಗಿದರೆ ಕಾಲುಗಳನ್ನು ಒತ್ತಿ ಬೇನೆ ಪರಿಹಾರ ಮಾಡುತ್ತೇನೆ " ಎಂದು ರಂಭೆ ಮುಖ ಅರಳಿಸಿದಳಂತೆ.

ಮಂಚದ ಹತ್ತಿರ ಹೋದಾಗ, ಹಾಸಿಗೆ ಮೇಲೆಲ್ಲಾ ಹೂವುಗಳು ಚೆಲ್ಲಾಡಿದ್ದುದನ್ನು ಇಂದ್ರ ಕಂಡನಂತೆ. ರಂಭೆಯು ಕಡೆ ತಿರುಗಿ ನೋಡಿದನಂತೆ.

" ಹೂವುಗಳೆಲ್ಲಾ ಎಷ್ಟು ಹಸನಾಗಿವೆ. ಸ್ವಲ್ಪವೂ ಬಾಡಿಲ್ಲ. ತುಸು ಕೂಡ ಮುದುರಿಲ್ಲ. ನೀವು ಬರುತ್ತೀರಿ ಎಂದು ಊಹಿಸಿದ್ದೆ " ಎಂದು ರಂಭೆಯಂದಳಂತೆ.

" ದಿಟ ! ಕಣೆ ! ರಂಭೆ ! " ಎಂದು ಅಟ್ಟಹಾಸದಿಂದ ಇಂದ್ರ ಹಾಸಿಗೆಯ ಮೇಲೆ ಪವಡಿಸಿದನಂತೆ.

" ಗಂಡಿನ ಹಣೇ ಬರಹವೇ ಇಷ್ಟು " ಎಂದು ರಂಭೆ ಮಂದಹಾಸದಿಂದ ಇಂದ್ರನ ಕಾಲುಗಳನ್ನು ಒತ್ತಲಾರಂಭಿಸದಳಂತೆ.

ಸ್ವರ್ಗದಲ್ಲಿ ಹೂವುಗಳು ಬಾಡುವುದೇ ಇಲ್ಲವಂತೆ !

ಅನುಮಾನವೂ ಮೂಡದೇ ಇದ್ದರೆ ಅದೇ ಸ್ವರ್ಗವಂತೆ ! !

‘ ಕೌರವಾವಲೋಕನ ”

ಸುಣ್ಣದ ಸಾಹುಕಾರ್ ಸೋಮಯ್ಯನವರು ಕ್ಲಬ್ಬಿಗೆ ಹೊಸದಾಗಿ ಸದಸ್ಯರಾಗಿದ್ದ ಕಾರಣ, ಠಾಕೋಠಾಕ್ ಆರು ಗಂಟೆಗೆ, ದೇವಸ್ಥಾನಕ್ಕೆ ಬರುವಂತೆ, ಯಥಾವಿಧಿಯಾಗಿ ಬರುತ್ತಿದ್ದರು. ಬಂದಕೂಡಲೇ ಪತ್ರಿಕಾ ಕೊಠಡಿಗೆ ಹೋಗಿ ಪತ್ರಿಕೆಗಳನ್ನು ಕೈಲಿ ಹಿಡಿದುಕೊಂಡು ಪಕ್ಕದಲ್ಲಿದ್ದವರನ್ನು ಕುರಿತು “ನಮಸ್ತೆ” ಎಂದು ಮಾತನಾಡಿಸಲಾರಂಭಿಸಿ, “ಏನಾದರೂ ತಿನ್ನೋಣವೇ” ಎಂದೇ ಮಾತನ್ನು ಮುಂದುವರಿಸುತ್ತಿದ್ದರು. ಹೀಗಾಗಿ ಕ್ಲಬ್ಬಿನ ಸದಸ್ಯರ ಪರಿಚಯ ಮಾಡಿಕೊಳ್ಳಬಹುದೆಂದೇ ಅವರ ಆಶಯ.

ರಾಮನವಮಿ ಸಂಜೆ ನಾನು ಸಿಕ್ಕಿಹಾಕಿಕೊಂಡೆ. ಆ ದಿನ ನನಗೆ ತಿಂಡಿ ಬೇಕಾಗಿತ್ತಿಲ್ಲ. ಇದರ ಮೇಲೆ ಸೈನ್ಯಕ್ಕೆ ತೊಡೆಯುವಸುಣ್ಣ ಸರಬಂರಾಜು ಮಾಡಿ ಲಕ್ಷಾಧೀಶ್ವರರಾದವರನ್ನು ಕಂಡರೆ, ದುಡಿದು ದುಡಿದು ಬಡವನಾಗೇ ಉಳಿದ ನನಗೆ ಸ್ವಲ್ಪ ಅಸೂಯೆ—ಮತ್ಸರ. ಅದಕ್ಕೇ ಕುಹಕವಾಡಿದೆ. “ರಾಮನವಮಿ! ಉಪವಾಸ ಸಾಹುಕಾರ್ರೇ! ಕ್ಷಮಿಸಿ, ಆದರೆ ಒಂದು ಪ್ರಶ್ನೆ ಕೇಳಬಹುದೇ” ಎಂದೆ. “ದಿವನಾಗಿ ಕೇಳಿ ಅದಕ್ಕೇನಂತೆ” ಅಂದರು. “ನೀವೇನೋ ನಾಟಕದ ಕಂಪನಿಯನ್ನು ಈಗ ನಡಸ್ತಾ ಇದೀರಂತೆ, ಸಿನಿಮಾ ತಾರೆ ಮುನಿಯೋಬಾಯಿ ಪ್ರಧಾನ ಪಾತ್ರವನ್ನು ವರಿಸುತ್ತಾಳಂತೆ, ನಷ್ಟವೇನೂ ಇಲ್ಲತಾನೆ” ಎಂದು ಕೇಳಿಯೇ ಬಿಟ್ಟೆ. ಅವನ ವೈಯಕ್ತಿಕ ದೋಷಗಳ ಸೂಚನೆ ಇದ್ದರೇನು? “ಅಯ್ಯೋ! ಬಿಡಿ ಸಾರ್! ನಾಟಕದಲ್ಲಿ ನಷ್ಟವಾಗದೇ ಇರುತ್ತ್ಯೆ? ತಿಂಗಳಿಗೆ ನಾಟಕದಲ್ಲಿ ಮುನ್ನೂರು ಖೋತಾ ಬೀಳುತ್ತೆ”.

“ಹಾಗೇ! ಮತ್ತೆ ಇನ್ನೂ ಯಾಕೆ ನಡಿಸ್ತಿದೀರೀ?”

“ನಾಟಕದಲ್ಲಿ ಹೋದರೇನಂತೆ, ಸಾರ್! ಹೊರಗಿರುವ ಬೀಡಿ ಅಂಗಡಿಗಳು ನನ್ನವೇ, ಅಲ್ಲಿ ಮಾರುವ ಬೀಡಾ ಬೀಡಿ ವ್ಯಾಪಾರದಲ್ಲಿ ಸಂಜೆಯೊಂದಕ್ಕೆ ೧೫ ರೂ. ಲಾಭ ಬರುತ್ತೆ”.

"ಅಷ್ಟು ಬೀಡಾ ಬೀಡಿ ಖರ್ಚಾಗುತ್ತ್ವೇ ಸಾಹುಕಾರ್ರೇ!"

"ಏನಂತೀರಿ ರಾಯರೇ! ನಾಟಕ ನೋಡಿ ಉಗಿಯುಕ್ಕೆ ಬೀಡಾ ಬೀಡಿ ಬಲು ಸಹಾಯ ಮಾಡುವ ಕಾರಣ ಬಂದವರೊಬ್ಬೊಬ್ಬರೂ ಎರಡು ಕಟ್ಟು ಬೀಡಿ ಆರೆಂಟು ಬೀಡ ಕೊಂಡುಕೊಳ್ತಾರ್ರೀ" ಎಂದು ಸಾಹುಕಾರ್ ಹೇಳಿ ನಗಲಾರಂಭಿಸಿದರು.

—ಶ್ರೀ ರಾಮಚಂದ್ರ! ನಿನ್ನ ಮಹಿಮೆ ಎಷ್ಟಪ್ಪ ಎಂದು ನೊಂದು ನುಡಿದೆ!

* * * *

೨

"ಹಾಳಾಗಿ ಹೋಯ್ತು ಕ್ಲಬ್ಬು! ಶಿಸ್ತಿಲ್ಲ, ಸೌಕರ್ಯವಿಲ್ಲ" ಎಂದು ರೇಗುತ್ತಾ ಅರವಾಮೊದ್ದು ಅಯ್ಯಂಗಾರ್ಯರು ಮೇಜಿನ ಮೇಲೆ ಸಿಗರೇಟ್ ಪ್ಯಾಕನ್ನು ಎಸೆಯುವ ಹೊತ್ತಿಗೆ ಸರಿಯಾಗಿ ನಾನು ಅವರು ಕುಳಿತಿದ್ದ ಮೇಜಿನ ಬಳಿಗೆ ಹೋಗಿ ಕುಳಿತುಕೊಂಡೆ. ರಾತ್ರಿ ಎಂಟು ಗಂಟೆ—ಅವನ ಮುಖ ನೋಡಿದೆ. ಭಟ್ಟ ತಲೆಯ ಮೇಲೆ ಉಳಿದಿದ್ದ ಹಲವಾರು ಕೂದಲುಗಳು ನಿಮಿರಿ ನಿಂತಿದ್ದುವು.

"ಶಾಂತಿ! ಅರವಾ ಮೊದ್ದು! ಶಾಂತಿ, ಶಾಂತಿ" ಎಂದೆ, ಮೇಜಿನ ಮೇಲೆ ಬಿದ್ದಿದ್ದ ಸಿಗರೇಟ್ ಪ್ಯಾಕ್‌ಅನ್ನು ಕೈಗೆ ತೆಗೆದುಕೊಂಡು ಬಿಡಿಸುತ್ತಾ. ಅದು ಖಾಲಿ ಎಂದು ತಿಳಿದಾಗ ನನ್ನ ಮುಖ ಉದ್ದುದ್ದವಾದುದನ್ನು ನೋಡಿ, ನನ್ನ ಹುಬ್ಬಿನ ಕೂದಲು ಮುಳ್ಳುಹಂದಿಯಂತೆ ಆದುದನ್ನು ನೋಡಿ, ಅರವಾ ಮೊದ್ದು ನಗಲಾರಂಭಿಸಿದ.

"ನನಗೆ ಯಾಕೆ ಕೋಪ ಬಂತು ಈಗ ತಿಳಿಯಿತೇ! ಸಿಗರೇಟ್ ಮುಗಿದು ಹೋಗಿದೆ ಅಂತ ತಿಳಿದಾಗ, ಬೇರರನ್ನು ಕರೆದು ಕೂಗಿ 'ಸಿಗರೇಟ್ ಪ್ಯಾಕ್ ತೆಗೆದು ಕೊಂಡು ಬಾ' ಎಂದೆ. ಹತ್ತು ನಿಮಿಷಗಳಾದುವು, ಅವನು ಪತ್ತೆಯೇ ಇಲ್ಲ. "ಶಾಂತಿ ಅಂದೆಯಲ್ಲಾ, ಈಗ ನಿನ್ನ ಶಾಂತಿ ಎಲ್ಲೀ" ಎಂದ ಗಹಗಹಿಸುತ್ತಾ.

ಅಷ್ಟು ಹೊತ್ತಿಗೆ ಬೇರರು ಸಿಗರೇಟ್ ಪ್ಯಾಕನ್ನು ತಟ್ಟೆಯ ಮೇಲಿಟ್ಟುಕೊಂಡು ತಂದಿಟ್ಟ. ಅತಿ ವಿನಯದಿಂದ ತಂದಿಟ್ಟ. ಬೇಗ ಸಿಗರೇಟೊಂದನ್ನು ಅರವಾ ಮೊದ್ದು ಹಚ್ಚಿಕೊಂಡು ನನಗೊಂದನ್ನು ಕೊಡುವ ವೇಳೆಗೆ "ಎಷ್ಟು ಹೊತ್ತೋ ಒಂದು ಸಿಗರೇಟ್ ಪ್ಯಾಕ್ ತಂದು ಕೊಡೋದಕ್ಕೆ, ನಿಮ್ಮನ್ನು ಕೇಳೋರು, ನಿಮಗೆ ಹೇಳೋರು ಯಾರೂ ಇಲ್ಲವೋ" ಎಂದು ಬೇರರ ಕಡೆ ನೋಡುತ್ತಾ ಬೌ ಬೌ ಬೌ ಮಾಡಿದೆ.

ವಿನಯಸಂಪನ್ನ ಬೀರರು "ಅಮ್ಮಾವ್ರು ಕಾರಿನಿಂದ ಹೇಳಿ ಕಳಿಸಿದರು. ಝಟ್ಟಂತ ಬಾ ಎಂದು ಹೇಳಿದ್ದರು. ಅಲ್ಲಿಗೆ ಹೋಗಿ ಅವರು ಹೇಳಿದ್ದನ್ನು ತಂದು ಕೊಟ್ಟು ಬರೋ ಹೊತ್ತಿಗೆ ಹೊತ್ತಾಯ್ತು" ಎಂದ. "ಹಾಗೋ ಸರಿ!" ಸುಸ್ತಾಗಿ ಅಂದೆ. ಅರವಾ ಮೊದ್ದು ಮನೆಯವರು ಬಂದು ಆರ್ಡರ್ ಮಾಡಿದರೆ ಅರವಾ ಮೊದ್ದು ಸ್ವಯಂ ಶಿರಸಾ ವಹಿಸಿ ಮಾಡುವಾಗ ಬೀರರು ಓಡಿದ್ದು ಆಶ್ಚರ್ಯವೇನಲ್ಲ ವಲ್ಲ! ಸದ್ಯ! ನನ್ನ ಹೆಂಡತಿ ತೌರಿಗೆ ಹೋಗಿ ಮೂರು ತಿಂಗಳಾದ್ದರಿಂದ ಸುಖವಾಗಿದ್ದೆ ನಾನು.

ಆಮಾತು ಈಮಾತು ಆಡುವಾಗ ಅರವಾ ಮೊದ್ದು ಬೀರರನ್ನು ಕರೆದು ಒಂದು ಊಟ ತೆಗೆದುಕೊಂಡು ಬಾ ಎಂದ. "ಯಾಕೋ ಮನೆಗೆ ಊಟಕ್ಕೆ ಹೋಗುಲ್ಲವೇನೋ" ಎಂದೆ.

"ಮನೇಲಿ ಯಾರಿದಾರೆ. ಅವಳ ತಮ್ಮನ ಜತೆಗೆ ತಿರುಪತಿ ಯಾತ್ರೆಗೆ ಹೋಗಿದ್ದಾಳೆ ಮನೆಯಾಕೆ. ಇಲ್ಲೇ ಉಂಡು ನಿದ್ದೆ ಬಂದಾಗ ಮನೆಗೆ ಹೋದರೆ ಆಯ್ತು" ಎಂದ ಅರವಾ ಮೊದ್ದು.

ಬೀರರು ಅಂದಿದ್ದನ್ನು ಜ್ಞಾಪಿಸಿಕೊಂಡೆ. ಅರವಾ ಮೊದ್ದುವಿಗೆ ಹೇಳಿದೆ. "ನಿನ್ನ ಅಮ್ಮಾವ್ರು" ಅಂತ ಅಂದುಕೊಂಡೆ ಎಂದ ಅರವಾ ಮೊದ್ದು. ಆಗ ನಮ್ಮನೆ ವಿಷಯ ಹೇಳಿದೆ. ಹುಬ್ಬು ಎತ್ತುತ್ತಾ ಅರವಾ ಮೊದ್ದು ಹೇಳಿದ.

"ಎಲಾ! ಇವನ! ಎಲ್ಲರಿಗೂ 'ಅಮ್ಮಾವ್ರು' ಅಂತ ಹೇಳಿ, ತನ್ನ ಅಮ್ಮಾವ್ರ ಸೇವೆ ಮಾಡಿ ಬಂದನೋ ಏನೋ" ಎಂದು.

ಅರವಾ ಮೊದ್ದು ಜಾಣತನದ ಮಾತನ್ನಾಡಿದ್ದು ಆ ಸಂಜೆಯೇ! ಏನಿರಬಹುದು ಇದಕ್ಕೆ ಕಾರಣ ಎಂದು ಇನ್ನೂ ಯೋಚಿಸ್ತಾ ಇದೀನಿ

* * * *

೩

ಕ್ಲಬ್ಬಿನಲ್ಲಿ ಟೆನ್ನಿಸ್ ಆಡಬೇಕು ಎಂದರೆ, ಆಟ ಕಲಿತವರೆಲ್ಲಾ ರಾಮ್ಸ್ವಾಮೀಗೆ ಕಾಯುತ್ತಿದ್ದರು. ಯುವಕ, ಆಟ ಚೆನ್ನಾಗಿ ಆಡುತ್ತಾ ಇದ್ದ, ಹಾಗಂತ ಅಹಂಕಾರ ವಿದ್ದಿಲ್ಲ. ಎಲ್ಲರ ಜತೆಗೂ ನಗುಸರಸಿಯಾಗಿ ಅವರವರ ಅಂತಸ್ತಿಗೆ ಸರಿಯಾಗಿ ಅವಮಾನ ಮಾಡದೆ ಆಡುತ್ತಿದ್ದ. ಐ.ಎ.ಎಸ್. ಅಧಿಕಾರಿ ಯುವಕ. ನೋಡುಕ್ಕೆ ಚೆನ್ನ. ಕೇಳಬೇಕೇ? ಅವನು ಬಂದರೆ ಟೆನ್ನಿಸ್ ಮೈದಾನದಲ್ಲಿ ಬೆಳದಿಂಗಳು ಬಿದ್ದಂತಾಗುತ್ತಿತ್ತು.

ರಾಮ್ಸ್ವಾಮಿ ಹೊಸ ಚೆಂಡು ಹಾಕಿದ ದಿನ, ಕತ್ತಲು ಮೂಡುವ ಹೊತ್ತಿಗೆ ಬಂದ. ಎಲ್ಲರೂ "ಯಾಕೋ! ಇಷ್ಟು ಹೊತ್ತು? ಪೆಟ್ರೋಮ್ಯಾಕ್ಸ್ ಹಚ್ಚಿಸೋಣವೇ ನಿನ್ನ ಆಟಕ್ಕೆ" ಎಂದು ಆದರದಿಂದ, ಆದರೂ ಜುಗುಪ್ಸೆಯಿಂದಲೂ ಕೇಳಿದೆವು.

"ಕ್ಷಮಿಸಿ, ನನ್ನ ಮೊದಲ ಮಗುವಿಗೆ ಈ ಔಷಧಿ ಕುಡಿಸಿ ಎಂದು ಡಾಕ್ಟರು ಮಧ್ಯಾಹ್ನ ನೋಡಿ ಹೇಳಿದ್ದರು. ನನ್ನ ಹೆಂಡತಿ ಮಧ್ಯಾಹ್ನ ಮೂರು ಗಂಟೆಯಿಂದ ಕುಡಿಸಲು ಪ್ರಯತ್ನಪಟ್ಟಿದ್ದಳು. ನಾನು ಕಚೇರಿಯಿಂದ ಮನೆಗೆ ಹೋದಾಗ ಐದೂಕಾಲಾಗಿತ್ತು, ಇನ್ನೂ ಔಷಧಿ ಕುಡಿಸಿತ್ತಿಲ್ಲ. ನಾನೂ ಪ್ರಯತ್ನಪಟ್ಟೆ. ಕಡೆಗೆ ಕೂತು ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡೆ. ಕೊಡು ಔಷಧೀನ ಎಂದೆ. ಔಷಧಿ ಶೀಷೇನ ಎತ್ತಿಹಾಕಿಬಿಟ್ಟಳು ನನ್ನ ಹೆಂಡತಿ. ನೆಲದ ಮೇಲೆಲ್ಲಾ ಔಷಧಿ ಚೆಲ್ಲಿತು. ನನ್ನ ಶರಾಯಿಯೂ ಒದ್ದೆಯಾಗಿತ್ತು. ಮಗುವಿನ ಮೇಲೆ ಹಾಕಿದ್ದ ಕೈಗಳನ್ನು ತೆಗೆದೆ.

ಅರೆಕ್ಷಣದಲ್ಲಿ ಮಗು ಛಂಗಿ ಹಾರಿ ಹೋಗಿ ನೆಲದ ಮೇಲಿದ್ದ ಔಷಧಿಯನ್ನೆಲ್ಲಾ ನೆಕ್ಕಿ ನುಂಗಿತು.

ಬೇರೆ ಬಟ್ಟೆ ಹಾಕಿಕೊಂಡು ಬರುವ ಹೊತ್ತಿಗೆ, ನನ್ನ ಹೆಂಡತಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೋ ಹೊತ್ತಿಗೆ, ಇಷ್ಟು ಹೊತ್ತಾಯ್ತು ಕ್ಷಮಿಸಿ.

ನೀವೆಲ್ಲಾ ಅನುಭವಸ್ಥರು. ಮಕ್ಕಳು ಹೀಗ್ಯಾಕೆ ಮಾಡುತ್ತೆ? ಎಂದ.

"ಮಗು ಕ್ಷಣೋ ನೀನು, ಮನುಜನಿಗೆ ಮಗು ತಂದೆ ಅಲ್ಲವೇ" ಎಂದು.
ರಾಮ್ಸ್ವಾಮಿ ಸೋಟೆಯನ್ನು ಚಿವುಟಿದ, ಎಪ್ಪತ್ತರ ಪ್ರಾಯದ ಆಟಗಾರ.

* * * *

ಕುದುರೆಯ ದೋಣಿಯು ಗಂಡಸಿಗಿತ್ತರೆ
ಸ್ತಾನವ ಮಾನವ ನುಳಿಸಿ ಅವನ
ಭೂಮಿಯಮೇಲೂ ನೀರಿನಮೇಲೂ
ಮುಂದಕೆ ಮುಂದಕೆ ಪಯಣವ ಗೈವನು

ಒಲವಿನ ತರುಣಿಯು ದೊರಕಿದರವಗೆ
ನೀರಲಿ ನಡೆದು ನೆಲದಲಿ ಈಜಿ
ಸ್ಥಾನವ ಮರೆತು, ಮಾನವ ಬಿಟ್ಟು
ಹಿಂದಕೆ ಹಿಂದಕೆ ಬಿದ್ದೇಬಿಡುವನು!

B Q ರಾಮಯ್ಯನ ಭಾಷಣ

ಸಂಜೆ ಐದುಘಂಟೆಯಾಗಿತ್ತು. ವಸಂತಾ ತನ್ನ ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತು ಭಗ್ನ ಮನೋರಥರಾದ ಎಲ್ಲ ತರುಣಿಯರಂತೆ ಕವನ ಬರೆಯುತ್ತಿದಳು. ಅದೃಷ್ಟವಶಾತ್, ಆ ಕವನವನ್ನೋದುವ ಭೀಕರ ಸಂದರ್ಭ ನಮ್ಮನ್ನೆದುರಿಸುವುದಿಲ್ಲ. ಅವಳು ಅಲ್ಲಿಯವರೆಗೆ ಬರೆದಿದ್ದದು ಇಷ್ಟು ಮಾತ್ರ.

ವಸಂತ ಸ್ವಪ್ನ

ಆ ಕ್ಷಣದಲ್ಲಿ ಅವಳ ಮನಸ್ಸಿನಲ್ಲಿ ಡಿಕ್ಕಿ ಹೊಡೆಯುತ್ತಿದ್ದ ಆಲೋಚನೆಗಳ ಸೂಚಿ ನಮಗೆ ಅಲಭ್ಯವಾದುದರಿಂದಲೂ, ಮನಶ್ಶಾಸ್ತ್ರದ ರಿಫ್ಲೆಕ್ಸಸ್, ಮೇನಿಯಾಸ್, ಇಂಪಲ್ಸಸ್, ಕಾಂಪ್ಲೆಕ್ಸಸ್ ಮೊದಲಾದುವುಗಳ ಪರಿಚಯ ನಮಗೇ ಇಲ್ಲದುದರಿಂದಲೂ, ವಸಂತ ಸ್ವಪ್ನವನ್ನು ಮಾತ್ರ ವಾಚಕರೆದುರು ಇಟ್ಟು, ತೀರ್ಮಾನಗಳನ್ನು ವಾಚಕರಿಗೇ ಬಿಡುತ್ತೇವೆ.

ಭಗ್ನಪ್ರೇಮ, ನಿದ್ದೆಯ ಶತ್ರು ಎಂಬುದೂ ಕೂಡ ಶಂಕಾರ್ಹ ತೀರ್ಮಾನ: ಏಕೆಂದರೆ ವಸಂತಳ ಪ್ರೇಮ ಭಗ್ನವಾಗಿ ಇನ್ನೂ ನಾಲ್ಕಾರು ದಿನಗಳೂ ಆಗಿರಲಿಲ್ಲ. ಆದರೆ ಅವಳಿಗೆ ತನಿನಿದ್ರೆ (ಸುಷುಪ್ತಿ–ಎಲ್ಲಿ ಆತ್ಮನು ತಾನೇ ಆಗಿರುವನೋ ಅಂತಹ ಅವಸ್ಥೆ) ಬರಲಿಲ್ಲ. ಅವಳ ತೈಜಸಾತ್ಮನು ಕನಸ್ಸು ಕಾಣಲಾರಂಭಿಸಿದ. ಆದರೆ ಸಿಗ್ಮಂಡ್ ಫ್ರೂಡನು ಅದನ್ನು ವಿರೋಧಿಸಿ ಇದೆಲ್ಲಾ ಕೇವಲ ಲಿಬಿಡೋ ಎಂದ; ಆ ಸುದ್ದಿ ಬೇಡ.

ವಸಂತ ಶಾಂತಾಳನ್ನು ಹುಡುಕಿಕೊಂಡು ಹೊರಟಾಗ ಅವಳೆದುರು ಫ್ರಾಯ್ಡನು ಕೂಡ ಊಹಿಸದ ರೀತಿಯ ಭಾರೀ ಮೆರವಣಿಗೆಯೊಂದು ಹೊರಟಿತ್ತು. ‘N. K. ರಾಮಯ್ಯ ಜಿಂದಾಬಾದ್!’ ಎಂಬುದೇ ಅದರ ಘೋಷಣೆ. ಅಖಿಲಭಾರತ ಸ್ಕ್ರ್ಯಾಪ್ ಐರನ್ ಕೂಲಿಕಾರರ ಮೆರವಣಿಗೆಯದು. ನಡು ಬೀದಿಯಲ್ಲೇ ಕೆಂಪು ಬಾವುಟ ಊರಿದರು ‘ಜಿಂದಾಬಾದ್’ ಎಂದರು. ‘ಕಾಮ್ರೇಡ್ ಎನ್. ಕೆ. ರಾಮಯ್ಯನವರೇ ಇಂದಿನ ಮುಖ್ಯ ಭಾಷಣಕಾರರು’ ಎಂದು ಚಾ ಎನ್ ಲೈ ಪಕ್ಷಪಾತಿಯೊಬ್ಬ ಕೂಗಿ ಎದೆಗಿರಿದುಕೊಂಡು ಗತಜೀವನಾಗಿ ಬಿದ್ದ. ‘It essentially indicates sex’ ಎಂದು ಫ್ರಾಯ್ಡ್ಸ್ ಗಡ್ಡ ನೀವಿಕೊಂಡು ನಕ್ಕ.

ಬೀದಿಯನ್ನು ಹಿಂದಿಟ್ಟು ವಸಂತಾ ಸರ್ಕಲಿಗೆ ಬಂದಾಗ, ಅಲ್ಲಿ ಇನ್ನೊಂದು ಸಭೆ ಜಮಾಯಿಸಿತ್ತು. ದೀಪದ ಕಂಬದಡಿ ನಿಂತ ಕರಿಟೋಪಿಯೊಬ್ಬ ' ಮಿತ್ರರೇ, ಬಂಧುಗಳೇ, ಇದೀಗ ನೀವು ಗಣತಂತ್ರ ಪರಿಷತ್ ಆಶ್ರಯದಲ್ಲಿ ಎ. ಕೆ. ರಾಮಯ್ಯನವರ ಭಾಷಣ ಕೇಳಲಿದ್ದೀರಿ ' ಎಂದು ಒದರಿದ. ' ದೋಸ್ತಿಗಳೇ, ಯಾರರೇ ಕೇಳಿ ಕೇಳಿ ' ಎಂಬ ಕೂಗು ಕೇಳಿಸಿತು.

ವಸಂತಾ ವಿಸ್ಮಯ ಚಕಿತಳಾದಳು. ಈ ಊರಿನಲ್ಲಿ ಎಂಥ ಕಮ್ಯೂನಿಸ್ಟ್ ಪಾರ್ಟಿ ಎಲ್ಲಿಯ ಪರಿಷತ್? ಈ ರಾಮಯ್ಯ ಯಾರು? ಹತ್ತೇ ನಿಮಿಷದಲ್ಲಿ ಎರಡು ಪಾರ್ಟಿಯಲ್ಲ! ಶಾಂತಳ ಮನೆ ನಾಲ್ಕೆಂಟು ಹೆಜ್ಜೆಯಿರಬಹುದು. ಅಷ್ಟರಲ್ಲಿ ಹಿಂದಿನಿಂದ ಭೀಮಗರ್ಜನೆ ಕೇಳಿತು. " ದೇಶಭಕ್ತರೇ, ಸಮಾಜವಾದೀ ಸಮಾಜ, ಹದಿನೆಂಟು ಪಂಚವಾರ್ಷಿಕ ಯೋಜನೆಗಳು, ಕೇರಳದಲ್ಲಿ ಕಮ್ಯೂನಿಸಂ ಉಚ್ಚಾಟನೆ ಇವೆಲ್ಲಾ ಆದುದು ಕಾಂಗ್ರೆಸ್ಸಿನಿಂದಲ್ಲವೇ? ಇಂದು ದೇಶ ಮುಂದುವರಿಯಲು ಸಿದ್ಧವಿರದಿರಬಹುದು. ಯಾವ ಹುಡುಗಿ ಗಂಡನ ಮನೆಗೆ ಹೋಗಲು ಏಕ್ ದಂ ಖುಷಿ ತೋರಿಸುತ್ತಾಳೆ?" ಭಯಂಕರ ಚಪ್ಪಾಳೆ.

' ಇದುವರೆಗೆ ನೀವು ದೇ। ಭ। ಎ. ಕೆ. ರಾಮಯ್ಯನವರ ಭಾಷಣ ಕೇಳಿದಿರಿ. ಕಾಂಗ್ರೆಸ್ಸಿನ ನಾಯಕರುಗಳಲ್ಲಿ ಇವರ ಸ್ಥಾನ ಹಿರಿದು ' ಎಂಬ ಪ್ರಶಂಸೆ ಕೇಳಿಬಂತು ಪಾರ್ಟಿ ಸಭಾಸದರಿಂದ. " ಈಗಲೇ ಚಪ್ಪಾಳೆ ಬೇಡ. ರಾಮಯ್ಯನವರು ಮತ್ತೆ ವೇದಿಕೆ ಏರುತ್ತಿದಾರೆ. ನಿಮಗೆ ಮತ್ತೊಂದು ಸಂದೇಶ ಸಿಗಲಿದೆ.." " ಮಿತ್ರರೇ ನಾನು, ನೀವೆಲ್ಲ ತಿಳಿದಂತೆ ಎಕೆಯೂ ಅಲ್ಲ ಎಂಕೆಯೂ ಅಲ್ಲ. B. Q. ರಾಮಯ್ಯ ಜೈಹಿಂದ್"

ಶಾಂತಾಳ ಮನೆ ಬಾಗಿಲು ಮುಚ್ಚಿತ್ತು. ಅಲ್ಲಿಯೇ ಐದು ನಿಮಿಷ ಕಾದು ನಿಂತಳು ವಸಂತಾ.

" ಇದೇಕೆ ಈ ಬಾಗಿಲು ಮುಚ್ಚಿದೆ? ಶಾಂತಾ ಎಲ್ಲಿಗೆ ಹೋದಳು? ಬೀದಿಯ ತುಂಬಾ ಪೋಲೀಸರೇಕೆ ಸಾಲು ಸಾಲಾಗಿ ಬರುತ್ತಿರಬಹುದು? ಇಷ್ಟು ಹೊತ್ತಿಗೆ ಬಿ. ಕ್ಯು. ರಾಮಯ್ಯ ಮಸಾನಿ ಜೊತೆ ಡಿನ್ನರಿಗೆ ಹೋದನೋ? ಶ್ರೀಕಂಠನ್ನಾಯರ್ ಜೊತೆ ಕ್ವಿಲಾನಿನಲ್ಲಿರುವನೋ? ಮುಸ್ಲಿಂಲೀಗಿಗೆ ದಾಖಲಾದನೋ? ಯೊಗಾರು ಯೋಷೀಥಾ ಜೊತೆ ಟೀ ಕುಡಿಯುತ್ತಿರುವನೋ? ಇಂಗೆ ಮಾರ್ ಜೋಹಾನ್‌ಸನ್ ಜೊತೆ ಬಾಕ್ಸಿಂಗಿನಲ್ಲಿ ತೊಡಗಿದನೋ?"

" ಮಹನೀಯರೇ ಸ್ವತಂತ್ರ ಸದಸ್ಯರ ಪುರಪಿತೃ ಮೇಳದಲ್ಲಿ ಬಿ. ಕ್ಯು. ರಾಮಯ್ಯನವರ ಭಾಷಣವಿದೆ...." ಬೀದಿಯ ಮೈಕ್ ಒದರಿತು. ವಸಂತಾ ಮೆಟ್ಟಿಲಿಳಿದಳು. ಫುಟ್‌ಪಾತಿನ ಮೇಲೆ ಅವಳ ಪ್ರಿಯತಮ ನಿಂತಿದ್ದ.

ಅವಳನ್ನು ಗುರುತಿಸಲೂ ಇಲ್ಲ ಅವನ ಕಣ್ಣುಗಳು. ಅಷ್ಟು ಹೊತ್ತಿಗೆ ಸಿಗ್ಮಂಡ್ ಫ್ರಾಯ್ಡ್ (ಫ್ರಾಯಿಡ ನೋ ಫ್ರೂಡನೋ ಇದ್ದರೂ ಇರಬಹುದು) ರಸ್ತೆಯಿಂದ ಫುಟ್‌ಪಾತಿನ ಮೇಲಕ್ಕೆಗರಿ "ಬೀ. ಕ್ಯೂ. ರಾಮಯ್ಯನ ಭಾಷಣ ಕೇಳಲು ಹೋಗುವಿರಾ?" ಎಂದು ಸುಧಾಕರನನ್ನು ಪ್ರಶ್ನಿಸಿದ.

'ರಾಮಯ್ಯನ ಭಾಷಣವೇ ಏಕೆ? ಏನು ಭಾಷಣ? ಲಿಬಿಡೋಗೂ ಅದಕ್ಕೂ ಸಂಬಂಧವೇನು? ರಾಮಯ್ಯನಿಗೆ ಎಂಥ ಕನಸುಗಳು ಬೀಳುತ್ತವೆ? ರೈಲ್ವೆ ಎಂಜಿನೇ? ಹಾಗಿದ್ದರೆ ರಾಮಯ್ಯ ಫೈರ್ಮನ್ನನ ದೋಸ್ತಿ. ಲಾರಿ ಲೋಡಿಂಗ್ ಮಾಡುತ್ತಾ ಹಲಗೆಯ ಮೇಲೆ ಹತ್ತಿ ಓಡಾಡುವ ಕನಸು ಬಿದ್ದರೂ ಸಹ ರಾಮಯ್ಯ ಈ ಹಿಂದೆ ರಾಜಕೀಯಕ್ಕೆ ಸೇರುವ ಮೊದಲು ಹನೂಾಲಿಯಾಗಿದ್ದನೆಂದು ಸೂಚಿಸುತ್ತದೆಯೇ ಹೊರತು ಸುಪ್ತ ಚೇತನದ ಲಿಬಿಡೋವನ್ನಲ್ಲ." ಎಂದು ಸುಧಾಕರ (ವಸಂತಳ ಪ್ರಿಯತಮ) ಹೇಳಿದ.

ಇಷ್ಟೆಲ್ಲಾ ಮಾತುಕತೆ ನಡೆಯುವಷ್ಟರಲ್ಲಿ ರಾಮಯ್ಯ ಭೂಧಾನ ಚಳವಳಿಗೋ, ಅರಬ್ ಲೀಗಿಗೋ, ಅಂಗಾರಕ ಗ್ರಹಕ್ಕೋ ಸೇರಿರಬಹುದು ಎಂಬ ಚಿಂತೆಯಲ್ಲಿ ಮುಳುಗಿದ ವಸಂತ ಮನೆಗೆ ಹಿಂತಿರುಗಿದಳು. ಉಕ್ಕಿನ ಶಿರಸ್ತ್ರಾಣಗಳನ್ನು ಧರಿಸಿದ ರೋಮನ್ ಸೈನಿಕರು ಬೀದಿಯಲ್ಲೆಲ್ಲಾ ಗಸ್ತು ಹಾಕುತ್ತಿದ್ದರು. ಮನೆಯ ಕಾಂಪೌಂಡುಗಳಲ್ಲಿ ಜನ ಗುಂಪು ಗುಂಪಾಗಿ ನಿಂತು ಗುಸುಗುಟ್ಟುತ್ತಿದ್ದರು. ಭರ್ರನೆ, ಬಿರುಗಾಳಿಯೊಂದು ಬೀಸುತ್ತಿತ್ತು. 'ಕೊಲೆ' ಎಂದು ಯಾರೋ ಹಿಂದೆ ಗುಸು ಗುಟ್ಟಿದ್ದು ಕೇಳಿಸಿತ್ತು. 'ಕುಡುಗೋಲಿನಿಂದ ಕುತ್ತಿಗೆ ಕೊಯ್ದರಂತೆ!' ಇನ್ನೊಂದು ಧ್ವನಿ. 'ಇನ್ನೂ ಇಲ್ಲವಂತೆ!'

ಅಷ್ಟರಲ್ಲಿ ಬಿ. ಕ್ಯು. ರಾಮಯ್ಯನೇ ಬೀದಿಯಲ್ಲಿ ಬಂದ. ಅವನ ಬಾಯಲ್ಲಿ ಹಲ್ಲೊಂದೂ ಇರಲಿಲ್ಲ. ಅಂಗಾರ ಅಕ್ಷತೆಗಳನ್ನು ಹಚ್ಚಿಕೊಂಡು ಕೊರಳಲ್ಲಿ ರುದ್ರಾಕ್ಷಿಸರ ಹಾಕಿಕೊಂಡು ಬಂದ ಅವನು 'ವಸಂತಾ, ನನ್ನ ಭಾಷಣ ಕೇಳ್ತಿಯಾ?' ಎಂದು ಕೇಳಿದ.

'ಸಾಧ್ಯವೇ ಇಲ್ಲ. ರಾಮಯ್ಯನ ಭಾಷಣವೇ ಅಸಹನೀಯ. ಅದರಲ್ಲೂ ಕ್ಯು. ಏಕೆ ಇನ್ಷಿಯಲ್. ಬರುವುದೂ ಇಲ್ಲ ಕೇಳುವುದೂ ಇಲ್ಲ!'

"ನೀನು ಸೀರೆ ಉಟ್ಟಿದೀಯಲ್ಲಾ ಅಂಥದು ಎಲ್ಲಿ ಸಿಗುತ್ತೆ? ನಮ್ಮವಳಿಗೊಂದು ಒಯ್ಯಬೇಕು. ಅಂದ ಹಾಗೆ ನೀನು ಲಿಪ್‌ಸ್ಟಿಕ್ ಹಚ್ಚಿಕೊಳ್ತೀಯಾ? ಚೂಯಿಂಗಂ ಈ ಊರಲ್ಲಿ ಸಿಗುತ್ತೆ ಅಲ್ವೇ?

ವಸಂತ ಬೆದರಿ ಕಂಗೆಟ್ಟು ಓಡಲಾರಂಭಿಸಿದಳು. ಏಕೆಂದರೆ ರಾಮಯ್ಯನ ತಲೆ ಎಗರಿ ಹೋಗಿತ್ತು. ಸರ್ಕಲಿನಲ್ಲಿ ಶಾಂತಾ ಸಿಕ್ಕಳು. ‘ ವಸಂತೂ, ಬೇಗ ಬಾ ’ ಎಂದು ಕೈಹಿಡಿದು ದರದರ ಎಳೆದುಕೊಂಡು ಹೊರಟಳು. ಶಾಂತಾ ತನ್ನ ಮನೆಗೆ ವಸಂತಾನನ್ನು ಕರೆದುಕೊಂಡು ಹೋದಳು. ಅಡಿಗೆ ಮನೆಯಲ್ಲಿ ಒಂದು ರಕ್ತದ ಮಡು. ಅದರ ನಡುವೆ ಬಿ. ಕ್ಯು ರಾಮಯ್ಯನ ತಲೆ ? ‘ ಇವರು ತಂಬಿಟ್ಟಿನ ಉಂಡೆ ಕದಿಯಲು ಬಂದರು. ಕುಡುಗೋಲಿನಿಂದ ತಲೆ ಕಡಿದುಬಿಟ್ಟೆ ! ’ ಎಂದಳು ಶಾಂತಾ.

ಹೊರಗಡೆ ಮಿಂಚು ಎರಗಿತು. ಸಿಡಿಲು ಬಡಿದಿತು.

‘ ಬಿ. ಕ್ಯು. ರಾಮಯ್ಯನವರ ಭಯಂಕರ ಕೊಲೆ. ತಲೆ ನಾಪತ್ತೆ ’ ಎಂದು ಪೇಪರ್ ಮಾರುವ ಹುಡುಗರು ಕೂಗುತ್ತಿದ್ದರು.

ಫ್ರಾಯ್ಡ್ ತಲೆ ಕೊಡವಿದ. ‘ ನನ್ನ ತಲೆ ಯಾಕೋ ಸರಿಯಿಲ್ಲ. ಕ್ಯು. ಎಂಬುದೇ ಲಿಬಿಡೋ ಎನ್ನಲೇ ? Nervous breakdown ನನಗಾಗಿ ಕಾದಿದೆ. ಥರೋ ಅನ್ಯಾಲಿಸಿಸ್ ಈಸ್ ಇಂಡಿಕೇಟೆಡ್ ’ ಎಂದುಕೊಂಡು ವಿಲ್ಸನ್‌ಗಾರ್ಡನ್ ಬಸ್ ಹತ್ತಿದ.

ಅ. ರಾ. ಸೇ.



ಕರಗ ಕಂಡ ಕಾಮಿನಿಯ ಕೈಚೀಲ

"ಸಿಡಿದೇ"

ನನ್ನ ಗೆಳೆಯನ ಹೆಸರಿನಲ್ಲಿ ಇದೊಂದು ಸಾರ್ವಜನಿಕವಾಗಿ ದಯಾಯಾಚನೆಯನ್ನು ಬೇಡುತ್ತಿದ್ದೇನೆ ಎನ್ನಬಹುದು.

ಹತ್ತು ವರ್ಷಗಳಿಂದ ಅವನಿಗೊಂದು ಕಾಹಿಲೆ. ಎಲ್ಲ ತರದಿಂದಲೂ ಪರೀಕ್ಷಿಸಿ ನೋಡಿದ್ದಾಯಿತು. ಈಗ ಇದನ್ನೋದಿ ಯಾರು ಬೇಕಾದರೂ ತಮಗೆ ಗೊತ್ತಿದ್ದ, ಶಕ್ಯವಿದ್ದ ಉಪಾಯವನ್ನು ಸೂಚಿಸಿ ಒಂದು ಜೀವವನ್ನು ಉಳಿಸಿಕೊಳ್ಳಬೇಕು.

ಹತ್ತುವರ್ಷಗಳ ಹಿಂದಿನ ಕತೆ. ಪಾಪ! ಬಡತನ, ಕಷ್ಟನಷ್ಟಗಳಿಗೆ ಗುರಿಯಾಗಿದ್ದ ನನ್ನ ಗೆಳೆಯನಿಗೆ ಕೊನೆಗೆ ಒಂದು ನೌಕರಿ ಸಿಕ್ಕಿತು. ಆಗ ಅವನ ತೂಕ ೧೧೨ ಪೌಂಡು; ಈಗ ಆ ಹನ್ನೆರಡು ಹಾಗೇ ಉಳಿದಿದ್ದರೂ ಮೊದಲಿನ ಅಂಕಿ ಇಮ್ಮಡಿ ಆಗಿದೆ. ಈ ತುಲಾಭಾರದ ಮೊದಲ ಲಕ್ಷಣ ಕಂಡಕೂಡಲೆ ಒಬ್ಬ ಡಾಕ್ಟರನ ಕಡೆ ಅವನನ್ನು ಕರೆದೊಯ್ದಿದ್ದೆ. ಅವರು ಸೂಕ್ಷ್ಮವಾಗಿ ಪರೀಕ್ಷಿಸಿ "ವಿಶೇಷ ಏನೂ ಇಲ್ಲ, ಕೊಂಚ ಅಜೀರ್ಣದ ಪ್ರಭಾವ" ಎಂದು ನಕ್ಕುಬಿಟ್ಟರು.

ಬಹಳ ವರ್ಷಗಳಿಂದ ಹೊಟ್ಟೆತುಂಬ ಊಟ ಇಲ್ಲದ್ದಕ್ಕೆ ನೌಕರಿ ದೊರೆತ ಮೇಲೆ ನನ್ನ ಗೆಳೆಯ ಬಾಯಿಯನ್ನು ಸಡಿಲು ಬಿಟ್ಟಿರಬಹುದೂ ಶಕ್ಯವಿದ್ದಿತು; ಅಂತೂ, ಅಂದಿನಿಂದ ಅವನನ್ನು ಪೂರ್ತಿ ನನ್ನ ದೃಷ್ಟಿಚ್ಛತ್ರದೊಳಗಿರಿಸಿಕೊಂಡೆ. ಮೂರು ತಿಂಗಳ ಕಾಲ ಅವನ ಊಟದಲ್ಲಿ ಕೈ-ಬಾಯಿಗಳೆರಡನ್ನೂ ಹಿಡಿತದಲ್ಲಿಟ್ಟು (ಒಂದರೊಂದರ ಹಿಡಿತವಲ್ಲ, ಎರಡೂ ಪ್ರತ್ಯೇಕವಾಗಿ) ತುಸು ಧೈರ್ಯದಿಂದಲೆ ಅದೇ ಡಾಕ್ಟರ ಕಡೆ ಹೋದೆವು; ವಸ್ತುಸ್ಥಿತಿಯನ್ನು ಬಣ್ಣಿಸಿದೆವು. ಅದನ್ನು ಕೇಳಿ ಅವರು "ಹಾಗಿದ್ದರೆ ಹೀಗಾಗಬಾರದಾಗಿತ್ತಲ್ಲ" ಎಂದು ಗೊಣಗಿ ಬಟ್ಟೆ ಬಿಚ್ಚಲು ಹೇಳಿದರು. ಹಾಂ! ಹೇಳಲು ಮರೆತಿದ್ದೆ. ಕಳೆದ ಸಲ ಗುಂಡಿಗಳನ್ನು ಬಿಚ್ಚಲಾಗಿತ್ತು; ಈ ಸಲ ಅದನ್ನು ಮುಚ್ಚುವುದೇ ಶಕ್ಯವಾಗಿರಲಿಲ್ಲ. ಅಂತೂ ಎಲ್ಲ ಪರೀಕ್ಷಿಸಿ ಕೊನೆಗೆ "ಉಹುಂ ...ಇನ್ನೂ ಅಜೀರ್ಣಾಂಶದ ಪ್ರಭಾವ ಇದೆ" ಎಂದರು. "ನೀವು" ಎಂದು ನನ್ನನ್ನು ನೋಡಿ ನಕ್ಕರು. "ನಾನು ಈ ಸಲ ಅವನನ್ನ ಚೆನ್ನಾಗಿ ನೋಡಿಕೊಳ್ಳುತ್ತೇನೆ, ಡಾಕ್ಟರರೆ" ಎಂದು ನಾನೂ ಭರವಸೆಯನ್ನು ಕೊಟ್ಟೆ.

ಅಂದಿನಿಂದ ನನ್ನ ಗೆಳೆಯನಿಗೆ ಒಂದೇ ಊಟ! ಅದೂ ಅನ್ನವಿಲ್ಲ, ಬರೀ ಚಪಾತಿ; ಆಲೂಗಡ್ಡೆ ಇಲ್ಲ, ಬರೀ ಹಾಗಲಕಾಯಿ. ಅಂತೂ ಮೂರು ತಿಂಗಳಲ್ಲಿ ಅವನು "ಹಸಿವೆ, ಹಸಿವೆ" ಎಂದು ಸುರಿದ ಬೆವರಿನ ತೂಕವೆ ನೂರಕ್ಕೆ ಮಿಕ್ಕಿದ ಪೌಂಡುಗಳಷ್ಟಾಗಿರಬೇಕು. ಕೊನೆಗೆ ಧೈರ್ಯದಿಂದ ಡಾಕ್ಟರರ ಕಡೆಗೆ ಹೋದೆವು. ಅವರು ನನ್ನ ಗೆಳೆಯನನ್ನು ನೋಡಿದೊಡನೆ ಮಾತಿಲ್ಲದೆ ಪರೀಕ್ಷಿಸಿದರು; ಅವನ ತೂಕವನ್ನು ನೋಡಿದರು; ೧೮೦ ಪೌಂಡು! ಕಳೆದ ಸಲಕ್ಕಿಂತ ೨೦ ಪೌಂಡು ಹೆಚ್ಚು. ಆಮೇಲೆ ನನ್ನನ್ನು ಮುಂದೆ ನಿಲ್ಲಿಸಿಕೊಂಡರು. "ಇದೇನು, ಡಾಕ್ಟರರೆ, ಮರೆತಿರೇನು?" ಎಂದು ನಗುತ್ತ ನೋಡಿದರೆ ನನ್ನ ತೂಕವೂ ನಲವತ್ತು ಪೌಂಡುಗಳಷ್ಟು ಹೆಚ್ಚಾಗಿದೆ!

"ಇಬ್ಬರಿಗೂ ಪಚನಶಕ್ತಿ ಸಾಲದು" ಎಂದರು ಡಾಕ್ಟರರು. ಬೇರೆ ಡಾಕ್ಟರರನ್ನು ಕೇಳಿದ್ದಾಯಿತು, ತಜ್ಞರನ್ನು ಕಂಡದ್ದಾಯಿತು. ಎಲ್ಲರದೂ ಒಂದೇ ಪಲ್ಲವಿ. "ಅಜೀರ್ಣ, ಪಚನಶಕ್ತಿ ಸಾಲದು" ಎಂದು. ಈ ಸಲ ನಾವಿಬ್ಬರೂ ಸಕ್ಕರೆಯನ್ನು ಪೂರ್ತಿಯಾಗಿ ಬಿಟ್ಟುಕೊಟ್ಟೆವು. ಇಷ್ಟರಲ್ಲಿ ನನ್ನ ಗೆಳೆಯ ಒಂದು ಕಾರನ್ನು ಕೊಂಡಿದ್ದ. ವ್ಯಾಯಾಮ ಸಾಲದೇನೊ ಎಂದು ನಾವಿಬ್ಬರೂ ಕಾರನ್ನು ಷೆಡ್ಡಿನಲ್ಲಿಟ್ಟು ಮೈಲಿಮೈಲಿಗಳ ಪಾದಸಂಚಾರ ಮಾಡಿದೆವು. ಈರುಳ್ಳಿ ತಿಂದರೆ ಒಳ್ಳೇದು ಎಂದ ನನ್ನ ಗೆಳೆಯ; ಮೆಣಸಿನ ಕಾಯಿಯನ್ನು ಹೆಚ್ಚಾಗಿ ಬಳಸಿದರೆ ಒಳ್ಳೆಯದೇನೊ ಎಂದು ನಾನು ಅಭಿಪ್ರಾಯಪಟ್ಟೆ; ಕೊನೆಗೆ ಈ ಸಲ ನನ್ನ ಗೆಳೆಯನಿಗೆ ದಿನಕ್ಕೊಂದಾವರ್ತಿ ಅನ್ನವನ್ನು ಮಾತ್ರ ತಿನ್ನಲು ಅಪ್ಪಣೆಯನ್ನು ಕೊಟ್ಟೆ. ಆ ಅನ್ನವನ್ನೂ ಶಾಸ್ತ್ರಕ್ಕನುಸಾರವಾಗಿಯೆ ಕುದಿಸಲಾಗುತ್ತಿತ್ತು. ತೂಕವನ್ನು ಇಳಿಸಲು ಉಪ್ಪು ಪ್ರಯೋಜನಕಾರಿ ಎಂದು ಹೇಳಿದ್ದರಿಂದ ಅನ್ನದಲ್ಲಿಯೆ ಮುಷ್ಟಿ ಉಪ್ಪನ್ನು ಚೆಲ್ಲುತ್ತಿದ್ದೆ. ಅಂತೂ ಈ ಸಲದ ತಪಸ್ಸು ಘೋರವಾದುದು ಎಂಬ ಧೈರ್ಯದಿಂದ ಡಾಕ್ಟರರ ಕಡೆ ಹೊರಟೆವು.

ಹೊರಡುವಾಗ ಒಂದುವಿಷಯ ಚರ್ಚೆಗೆ ಬಂದಿತು ನಮ್ಮಿಬ್ಬರಲ್ಲಿ. ಹೇಗೆ ಹೋಗುವುದು? ನಡೆದುಕೊಂಡೇ ಹೋಗುವುದು ಎಂದು ನನ್ನ ಗೆಳೆಯನ ಹಟ. ಆದರೆ ವಸ್ತುಸ್ಥಿತಿಯನ್ನು ಕಣ್ಣಾರೆ ಕಾಣುತ್ತಿದ್ದ ನನಗೆ ಬೇರೊಂದು ವಿಚಾರವೆ ಹೊಳೆಯಿತು. ನಡೆಯುವ ಬದಲು ಉರುಳುತ್ತ ಹೋದರೆ ಹೆಚ್ಚು ಅನುಕೂಲ ಎನ್ನಿಸಿತು. ನನ್ನ ಗೆಳೆಯನಿಗೆ ಮೈ ನಡುಗಿತು ಕೋಪದಿಂದ, ಪೃಥ್ವೀಗೋಲವು ಕಂಪಿಸಿದಂತೆ. ಹಾಗೆ ಕೇಳಿದರೆ ಅವನಿಗೆ ಕೋಪಿಸಲು ಕಾರಣವೆ ಇದ್ದಿರಲಿಲ್ಲ. ಅವನಂತೆ ಉರುಳುತ್ತ ಹೋಗಲು ನಾನೂ ಸಿದ್ಧನಿದ್ದೆ.

"ನೀನು ಸಿದ್ಧನಿರಬಹುದು! ಆದರೆ ನನ್ನ ಹಾಗೆ ನಿನ್ನ ಮೈಬಣ್ಣ ಕಪ್ಪು ಇಲ್ಲ ಅನ್ನೋದರ ಜಂಭ ನಿನಗೆ! ನಾನು ಉರುಳ್ತಾ ಹೋದರೆ ಎಲ್ಲಿಯೊ ರಸ್ತೇ

ರಿಪೇರಿಗೆ ಟಾರ್ ಸುರಿದು ಖಾಲೀ ಡ್ರಮ್ ತಂತಾನೇ ಉರುಳ್ತಾ ನಡೆದಿದೆ ಅಂತ ಜನ—"

ನನ್ನ ಗೆಳೆಯನ ಮಾತು ಮುಗಿಯುವ ಅಗತ್ಯವೇ ಇದ್ದಿರಲಿಲ್ಲ. ಟಾರ್ ಎಣ್ಣೆ ಡ್ರಂ ಅವನಾದರೆ ನಾನು ಕನಿಷ್ಠಪಕ್ಷಕ್ಕೆ ಬಲೂನ್ ಎನ್ನಿಸಿಕೊಳ್ಳುತ್ತಿದ್ದೆ.

ಕೊನೆಗೆ ಈ ಯಾವ ವಿಚಾರವೂ ಬೇಡ. ರಾತ್ರಿ ೧೧ ಗಂಟೆಗೆ ಬೀದಿಯಲ್ಲಿ ಯಾವ ವಾಹನದ ಓಡಾಟವೂ ಇಲ್ಲದಾಗ ಇಬ್ಬರೂ ಭುಜಕ್ಕೆ ಭುಜ, ಇಲ್ಲವೆ ಪರಿಘಕ್ಕೆ ಪರಿಘ ಎನ್ನಿ, ಹಚ್ಚಿಕೊಂಡೇ ಹೋಗೋಣ ಎಂದು ನಿರ್ಧರಿಸಿದೆವು.

ಆ ನಿರ್ಣಯವನ್ನು ಡಾಕ್ಟರರಿಗೆ ಟೆಲಿಫೋನಿನಿಂದ ತಿಳುಹಿಸಿದೆವು. ಇದನ್ನೀಗ ಡಾಕ್ಟರರ ಮನೆಯಿಂದಲೆ ಬರೆಯುತ್ತಿದ್ದೇನೆ. ಯಾಕೆಂದರೆ, ಡಾಕ್ಟರರ ಚಿಕಿತ್ಸೆಯ ತರುವಾಯ ಪರಿಸ್ಥಿತಿಯೆ ಹಾಗೆ ರೂಪುಗೊಂಡಿದೆ. ಈ ಸಲವೂ ಡಾಕ್ಟರರು ಅದನ್ನೇ ಹೇಳಿದರು, "ತಿಂದುದನ್ನು ದಕ್ಕಿಸಿಕೊಳ್ಳದೇ ಹೋಗಿದ್ದೀರಿ" ಎಂದು. ಆಗ ನಾನು ತಡೆಯದಾಗಿ ಡಾಕ್ಟರರಿಗೆ ನಮ್ಮ ಆಹಾರದ ಪೂರ್ತಿ ಕಾರ್ಯಕ್ರಮವನ್ನು ಒಪ್ಪಿಸಿದೆ. ಆದರೂ ಡಾಕ್ಟರರು ತಮ್ಮ ಹಟವನ್ನು ಬಿಡಲಿಲ್ಲ. ಈಗಾಗಲೇ ಎರಡು ಗಂಟೆ ನಿರರ್ಥಕವಾಗಿ ಕಳೆದಿವೆ. ಛಿ! ಬೇರೊಬ್ಬ ತಜ್ಞನ ಕಡೆಯಾದರೂ ಹೋಗೋಣ ಎಂದು ನಾವಿಬ್ಬರೂ ಎದ್ದೆವು, ಹೊರಟೆವು, ಆದರೆ ರಾತ್ರಿಯ ಚಳಿಗೆ ಬಾಗಿಲು ಕಿರಿದಾಗಿತ್ತೊ ಅಥವಾ ನಮ್ಮ ಕಾಹಿಲೆಯೆ ಉಲ್ಬಣಾವಸ್ಥೆಯನ್ನು ಮುಟ್ಟಿತ್ತೊ! ಅಂತೂ ಇಲ್ಲಿಯೆ ಉಳಿಯಬೇಕಾಗಿ ಬಂದಿದೆ. ಕೊನೆಗೆ ತಡೆಯದಾಗಿ ಡಾಕ್ಟರರಿಗೆ ಕೇಳಿದೆ—

"ದಕ್ಕಿಸಿಕೊಳ್ಳದಂತಹ ಯಾವುದನ್ನ ನಾವು ತಿಂದೀವಿ ಅಂತ ನಿಮ್ಮ ಸಂಶಯ" ಎಂದು.

ಡಾಕ್ಟರರು ನಗೆಯಿಂದ ಹೇಳಿದರು, "ಅದರ ಶಾಸ್ತ್ರೀಯ ಹೆಸರನ್ನು ಹೇಳಿದರೆ ನಿಮಗೆ ತಿಳಿಯಲಿಕ್ಕಿಲ್ಲ. ವ್ಯವಹಾರದ ಭಾಷೆಯಲ್ಲಿ ಅದಕ್ಕೆ ಲಂಚ ಎನ್ನುತ್ತಾರೆ" ಎಂದು.

ಏನಾದರೂ ಔಷಧಿ ಇದೆಯೆ ಯಾರ ಹತ್ತಿರದಲ್ಲಾದರೂ?

—ಶ್ರೀರಂಗ

'ಮಾರ್ಕೋನಿ'ಗೆ

ಇನಿತು ಮೌನವಿದೇಕೆ ಎನ್ನಿದಿರೊಳ್ ಏ ಮಾರ್ಕೋನಿಯೆ
ಇನಿತು ಧಣ್ಣಗಿದೇಕೆ ಕೊರೆಯುತಿಹುದೇಕೆ ?

ನುಲಿತ ಗಿಲಿತಗಳು ನಿನಗೀಯವೇ ಸುಖವ
ಬೀಸುತಿಹ ಬಿರುಗಾಳಿ ಹಾರಿಸಿತೆ ದನಿಯ
ಕಾಳಮೇಘಗಳು ಕಿತ್ತೊಯ್ದವೇ ಅಸುವ
ಗಗನ ಪಿಶಾಚಿಗಳು ಊಳಿಡದೆ ಇಹವೆ ?

ಆಯಸವನಿತ್ತವನಲ್ಲ ನಾನೆಂದಿಗುಂ
ನೋಯಿಸಲು ಕೈಚಳಕ ತೋರಿದವನಲ್ಲ
ತಂತಿ ನರಗಳ ಎಳೆದು ನೋಡಿದವನಲ್ಲ
ಪಾರ್ಟುಗಳ ಕೈಹಾಕಿ ಕೆಡಿಸಿದವನಲ್ಲ

ಆಗಿರುವುದೇನೆಂದು ಪೇಳಿನ್ನು ಮಾರ್ಕೋನಿಯೆ
ಮತ್ತೆ ಉಸಿರಾಡದಲೆ ಕೊರಗಬೇಡಿಂತು
ಮೌನತಪವನು ನೀಗು ಗಂಟಲನು ತೋರು
ನಾದವನು ಮೊಳಗಿಸುವ ಮನಸು ಮಾಡು

ಇನಿತು ತಾಮಸವೇಕೆ ಇನಿತು ಸಿಟ್ಟೇಕೆ
ರಿಪೇರಿ ರಂಗಣ್ಣನೇ ನಿನಗೆ ಬೇಕೆ ?

(ವಿ. ಸೀ. ಅವರ ಕ್ಷಮೆ ಬೇಡಿ)

—ರಾಮಿ

ಯಾರಾದರೂ ನೋಡುತ್ತಾ ಇದ್ದಾರೆ ಎನ್ನುವುದನ್ನು ಸೂಚಿಸುವ ಶಕ್ತಿಯನ್ನೇ ಅಂತರ್ವಾಣಿ ಎನ್ನುವುದು !

* * * *

ನೆನಪಿನಲ್ಲಿರುವುವುದೆಲ್ಲಾ ಅವರವರ ಸ್ವಂತ ಸಾಹಿತ್ಯ !

ಲಕ್ಷ್ಮಿ ಒಲಿದಳು

ಬೇರೆಯವರಿಗೆ ಲಕ್ಷ್ಮಿ ಹೇಗೆ ಒಲಿದಿದ್ದಾಳೋ ನನಗೆ ತಿಳಿಯದು; ನನಗಂತೂ ಸೊಳ್ಳೆರೂಪದಲ್ಲಿ ದರ್ಶನವಿತ್ತಳು. ಹೌದು ಸ್ವಾಮಿ ನಾನು ಹೇಳುತ್ತಿರುವುದು ನಿಜ. ರಾಮಪುರದ ನಾಲ್ಕು ಮತ್ತು ಐದನೆ ಬೀದಿಗಳ ನಡುವೆ ಇರುವೆ "ಸಹಕಾರಿ ಸೊಳ್ಳೆ ಕ್ಷೇತ್ರ ಮತ್ತು ಸಂಶೋಧನಾಲಯವೇ" ಸಾಕ್ಷಿ.

"ಅಪ್ಪನ ಆಸ್ತಿ" ಎಂದು ನನ್ನ ಮತ್ತು ರಂಗನ ಪಾಲಿಗೆ ಬಂದದು: ಒಂದು ಜೋಪಡಿ ಮತ್ತು ಅದರ ಮುಂದಿನ 60'x60'ರ ಖಾಲಿ (?) ಸೈಟು ಸುಮಾರು ನೂರು ದೊಡ್ಡ 'ಗೋಲ್ಡ್ ಫ್ಲೇಕ್' ಬರ್ಕ್ಲಿ ಮತ್ತು ಸ್ಟಾರ್ ಸಿಗರೇಟ್ ಡಬ್ಬಗಳು. ನಾವಿಬ್ಬರೂ ದಡ್ಡರೆಂದೇ ಹೇಳಬೇಕು. ಜೂಆಲಜಿ ಆನರ್ಸ್‌ನ ಫಸ್ಟ್‌ಕ್ಲಾಸಿನಲ್ಲಿ ಮೊದಲನೇ ಸಾರ್ತಿಯಲ್ಲೇ ಮುಗಿಸಿದೆವು. ಬಿಟ್ಟಿ ಕೆಲಸ ಮಾಡುತ್ತೇವೆಂದರೂ ನೌಕರಿ ದೊರೆಯಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಅಲೆದು ರಾತ್ರೆ ಮಲಗಲು ಜೋಪಡಿಗೆ ಬಂದರೆ, ನಿದ್ರೆಯೂ ಇಲ್ಲ. ನಿದ್ರೆ ಹೇಗೆ ತಾನೆ ಬಂದೀತು? ನಮ್ಮ ಖಾಲಿ ಸೈಟಿನಲ್ಲಿ ಸಹಕಾರಿ ತತ್ವದಲ್ಲಿ ಬೆಳೆಸುತ್ತಿದ್ದ ಸುಮಾರು 800 ಸಾವಿರ ಕೋಟಿ ಸೊಳ್ಳೆಗಳು ಧಾಳಿ ಮಾಡಿದರೆ ಸತ್ತವರೂ ಎದ್ದು ಓಡುವುದರಲ್ಲಿ ಸಂಶಯವೇ ಇಲ್ಲ. ಆಚೆಮನೆಯ ಬೂದಿ, ಈಚೇಮನೆಯ ಬಚ್ಚಲುಕೊಚ್ಚೆ, ಅಕ್ಕಪಕ್ಕದ ಸಣ್ಣಮಕ್ಕಳು, ಸುಮಾರು 50 ಕೋಳಿಗಳು, ಕಾರ್ಪೋರೇಶನ್ನಿನ ಎರಡು ಕಸದ ತೊಟ್ಟಿಗಳು—ಇಷ್ಟನ್ನೂ ಆವರಿಸಿ ತುಂಬಿಹರಿಯುವ ದೊಡ್ಡಮೋರಿ—ಈ ಎಲ್ಲಾ ಸೌಲಭ್ಯಗಳನ್ನೂ ಉಪಯೋಗಿಸಿಕೊಂಡು ಬಂದಿತು ನಮ್ಮ ಸೈಟಿನಲ್ಲಿ ಬಂಪರ್ ಸೊಳ್ಳೆಬೆಳೆ. ಯಾರ ಬಲವಂತವೂ ಇಲ್ಲದೆ, ಸ್ವಯಂಪ್ರೇರಣೆಯಿಂದ, ಸರ್ವರ ಸಹಕಾರದಿಂದ ದ್ವಿಗುಣಗೊಂಡಿತು.

1-4-1958 ನಮ್ಮಿಬ್ಬರ ಜೀವನದಲ್ಲಿ ಮಹತ್ವದ ದಿನ. ಅಂದು ರಂಗನಿಗೂ ರೇಗಿತು. ರಂಗ ರೇಗಿದನೆಂದರೆ ಅವನು ರಂಗನಲ್ಲ; ಇಂಗು ತಿಂದ ಮಂಗನೇ ಸರಿ. ಆಗತಾನೆ ಕಾರ್ಪೋರೇಶನ್ನಿನವರ "ಕೆಲಸ ಖಾಲಿ ಇಲ್ಲ" ಕಾರ್ಡು ಬಂದಿತ್ತು. ಮಲಗಲು ಪ್ರಯತ್ನ ಮಾಡಿದ; ನಿದ್ರೆಯೂ ಬರಲಿಲ್ಲ. ಎದ್ದು ಕೂತು ಮೂವತ್ತು ನಿಮಿಶಗಳಲ್ಲಿ ಸುಮಾರು 800 ಸೊಳ್ಳೆಗಳನ್ನು ಕೂಡಿಹಾಕಿ, ಅವುಗಳನ್ನು 8 ಗೋಲ್ಡ್‌ಫ್ಲೇಕ್ ಡಬ್ಬಿಗಳಲ್ಲಿ ಸಮನಾಗಿ ವಿಂಗಡಿಸಿ ಒಂದೊಂದು ಡಬ್ಬಿಯಲ್ಲೂ "ಈ ಮಾದರಿಯ ಸೊಳ್ಳೆಗಳನ್ನು ನೀವೆಲ್ಲಾದರೂ ಕಂಡಿದ್ದೀರಾ? ನಿಮ್ಮ ಅಭಿಪ್ರಾಯವನ್ನು ದಯವಿಟ್ಟು ಕೆಳಗಿನ ವಿಳಾಸಕ್ಕೆ ತಿಳಿಸಿ" ಎಂದು ಒಂದು ಪತ್ರವನ್ನಿಟ್ಟು

ನಾಲ್ಕು ದೇಶೀಯ ಎರಡು ಅಮೇರಿಕೆಯ ಲ್ಯಾಬೋರೇಟರಿಗಳಿಗೆ, ಆರೋಗ್ಯ ಇಲಾಖೆಗೆ ಮತ್ತು ಸಿಟಿ ಕಾರ್ಪೋರೇಶನ್ನಿಗೆ ಪಾರ್ಸಲು ಮಾಡಿದ.

ದೇಶೀಯ ಲ್ಯಾಬೋರೇಟರಿಗಳಿಂದ ಒಂದು ತಿಂಗಳಿನಲ್ಲೇ ಜವಾಬು ಬಂತು

"....ನೀವು ಕಳುಹಿಸಿದ ಮಾದರಿ ಸೊಳ್ಳೆಗಳು ತಲುಪಿದವು. ಅವುಗಳಲ್ಲಿ 8 ಗಂಡು ಸೊಳ್ಳೆಗಳು ಸತ್ತುಹೋಗಿದ್ದವು. ಡಬ್ಬದ ಒಂದು ಭಾಗದಲ್ಲಿ ತೂತಾಗಿ ರುತ್ತದೆ. ಇನ್ನು ಮುಂದೆ ಈ ರೀತಿಯ ಮಾದರಿಗಳನ್ನು ಕಳುಹಿಸುವಾಗ ಗಂಡು ಸೊಳ್ಳೆಗಳನ್ನು ಬೇರೆ ಇಡುವುದು ಕ್ಷೇಮ. ಅವುಗಳ ಮೇಲಿನ ತನಿಖೆಗೆ ಹೆಚ್ಚಿನ ಶಿಬ್ಬಂದಿ ಕೇಳಿದೇವೆ. ಅದು ಮಂಜೂರಾದ ಕೂಡಲೆ ತನಿಖೆ ಮಾಡಿ ಅಭಿಪ್ರಾಯ ವನ್ನು ತಿಳಿಸುತ್ತೇವೆ. **ವಿ. ಸೂ. :—**ನಂ. 336688 ಏಪ್ರಿಲ್ 1-60 ನ ನಮೂದಿಸದಿದ್ದಲ್ಲಿ ನಿಮ್ಮ ಪತ್ರಗಳಿಗೆ ಗಮನ ಕೊಡಲಾಗುವುದಿಲ್ಲ".

ಇನ್ನೊಂದು ತಿಂಗಳು ಕಳೆಯುವುದರೊಳಗಾಗಿ ಆರೋಗ್ಯ ಇಲಾಖೆಯವರು ಜವಾಬು ಬರೆದರು :

"... ನಿಮ್ಮ ಸ್ಯಾಂಪಲ್ ಸೊಳ್ಳೆಗಳನ್ನು ಸಿಟಿ ಕಾರ್ಪೋರೇಶನ್ನಿನವರು ನಮಗೆ ಕಳುಹಿಸಿಕೊಟ್ಟಿದ್ದಾರೆ. ಆರೋಗ್ಯಾಧಿಕಾರಿಗಳು ಈ ವಿಶಯದ ಬಗ್ಗೆ ಉನ್ನತ ಶಿಕ್ಷಣ ಪಡೆಯಲು ಸ್ವಿಟ್ಸರ್ಲೆಂಡಿಗೆ ತೆರಳಿದ್ದಾರೆ. ಅವರು ಬಂದಕೂಡಲೆ ನಿಮ್ಮ ಪತ್ರವನ್ನು ಪರಿಶೀಲಿಸುತ್ತೇವೆ. ನಂ. 22446 — 1-4-60 ನಿಮ್ಮ ಪತ್ರದ ವ್ಯವಹಾರ ಸಂಖ್ಯೆ".

ಮತ್ತೆ ಹದಿನೈದು ದಿನಗಳಾದ ಮೇಲೆ ಅಮೇರಿಕಾದಿಂದ ಪತ್ರಗಳು ಬಂದವು:

"....ನಿಮ್ಮ ಸೊಳ್ಳೆಗಳು ತಲುಪಿದವು. ಈ ರೀತಿಯ ಸೊಳ್ಳೆಗಳನ್ನು ನಾವು ಇದುವರೆವಿಗೂ ಕಂಡಿಲ್ಲ. ಇವು ಭಯಂಕರ ತರಹೆಯವು. ಈ ಜಾತಿಯವನ್ನು ಬೆಳೆಸಲು ಮಾಡಿದ್ದ ಇಲ್ಲಿಯವರೆಗಿನ ಯತ್ನಗಳೆಲ್ಲ ವಿಫಲವಾಗಿದ್ದವು. ನೀವೂ ಬಹಳ ಕಷ್ಟಪಟ್ಟಿರಬೇಕು. ಇವುಗಳ ಮೇಲಿನ ನಿಮ್ಮ ಸಂಶೋಧನೆಯ ವರದಿಯ ಪ್ರತಿಯೊಂದನ್ನು ದಯವಿಟ್ಟು ಕಳುಹಿಸಿ. ನಿಮ್ಮ ಮುಂದಿನ ಸಂಶೋಧನೆಯನ್ನು ಸುಸಜ್ಜಿತವಾದ ಇಲ್ಲಿಯ ಲ್ಯಾಬೋರೇಟರಿಗಳಲ್ಲಿ ಮುಂದುವರಿಸಬೇಕೆಂದು ನಮ್ಮ ಕೋರಿಕೆ. ನೀವು ಕಳುಹಿಸುವ ಪ್ರತಿಯೊಂದು ಸೊಳ್ಳೆಗೂ 5 ಡಾಲರ್ ಕೊಡಲು ಸಿದ್ಧರಿದ್ದೇವೆ. ತಕ್ಷಣ ಜವಾಬು ಬರೆಯುವುದು".

ನಾನೂ ರಂಗ ಅಮೇರಿಕಾದಿಂದ ಬಂದು ಎರಡು ತಿಂಗಳಾಯಿತು. ರಾಮ ಪುರದ "ಸಹಕಾರಿ ಸೊಳ್ಳೆ ಕ್ಷೇತ್ರ ಮತ್ತು ಸಂಶೋಧನಾಲಯ"ದ ಉದ್ಘಾಟನೆಯನ್ನು ಮಾಡಿದ ಸಹಕಾರ ಮತ್ತು ಆರೋಗ್ಯ ಇಲಾಖೆ ಸಚಿವರು "ಈ ರೀತಿಯ ಕ್ಷೇತ್ರ ಗಳನ್ನು ದೇಶದಲ್ಲೆಲ್ಲಾ ಸ್ಥಾಪಿಸಬೇಕೆಂದಿದ್ದೇವೆ" ಎಂದಾಗ ಮುಂದಿನ ಬೆಂಚಿನವರು ಚಪ್ಪಾಳೆ ಹೊಡೆದರು ; ಹಿಂದಿದ್ದವರು "ಅಯ್ಯೋ" ಎಂದರು—ಎಂದು ಈಗತಾನೆ ರಂಗ ಪೀತ ಪತ್ರಿಕೆಯೊಂದರ ವರದಿಯನ್ನು ಓದಿ ನಕ್ಕ. ನಾನು ನಕ್ಕು ಅತ್ತೆ.

—ಬಿ. ನ. ನರಹರಿ

ಶಂಖದ ಹುಳು

ಶಂಕರ ಮೂರ್ತಿಯು ಸಮಯ ಸಿಕ್ಕಿದಾಗಲೆಲ್ಲ ಹರಾಜು, ಮಿಲಿಟರಿ ಸರಬರಾಜು ಡಿಪೋ, ಗುಜರಿ, ಮುಂತಾದ ಕಡೆ ಸಂಚು ಹಾಕುವ ಪದ್ಧತಿ. ಅಲ್ಲಿಂದ ನಾನಾ ಪದಾರ್ಥಗಳನ್ನು ಸಂಗ್ರಹಿಸುತ್ತಲೇ ಇರುವನು. ಇವೆಲ್ಲ ಏತಕ್ಕೆ ಎಂದರೆ "ಬೇಕಾಗುತ್ತವೆ ಕಣಯ್ಯ ಸಮಯದಲ್ಲಿ, ನಿನಗೆ ತಿಳಿಯದು" ಎಂದು ಬಿಡುವನು.

ಅವನ ಹತ್ತಿರ ನಾನಾ ಬಗೆಯ ಹ್ಯಾವರ್‌ಸ್ಯಾಕ್‌ಗಳು (ಬೆನ್ನಿನ ಚೀಲ), ವಾಟರ್ ಬಾಟಲ್‌ಗಳು, ಕೈಚೀಲಗಳು, ವ್ಯಾನಿಟಿ ಚೀಲಗಳು, ಕಾಲುಚೀಲಗಳು, ಇದ್ದವು. ಬೆಟ್ಟ ಹತ್ತಲು ಉಪಯೋಗವಾಗುವ ಬೂಟುಗಳು, ಬಂಡೆ ಹತ್ತಲನುಕೂಲವಾದ, ಮಂಜಿನಗಡ್ಡೆ ಮೇಲೇರುವುದಕ್ಕೆ ಮಾಡಿದ ಸ್ಪೆಷಲ್ ಪಾದರಕ್ಷೆಗಳು, ತೇನ್‌ಸಿಂಗ್ ಟೋಪಿ, ತೇನ್‌ಸಿಂಗ್ ಕೈಕೊಡಲಿ, ತೇನ್‌ಸಿಂಗ್ ಉಸಿರುಕೊಳವಿ ಮೊದಲಾದುವು ಇದ್ದವು.

ತರತರಹದ ಡೇರೆಗಳು. ಹಗುರವಾದ, ಗಾಳಿ ತುಂಬಿದರೆ ಊದಿಕೊಂಡು ನಿಂತು ಮನೆಯಂತಾಗುವ ಡೇರೆ, ಮಲಗುವ ಚೀಲ, ಗಾಳಿ ತುಂಬಲು, ಗಾಳಿ—ಬಾಂಬು, ಹಗುರವಾದ ರೇಷ್ಮೆ ಹುರಿಯ ಮಂಚ, ಗಾಳಿಯಲ್ಲಿ ತೂರಿಕೊಂಡು ಅನಾಯಾಸವಾಗಿ ಬೆಟ್ಟದಿಂದ ಕೆಳಗಿಳಿಸುವ ರೇಷ್ಮೆಪೊರೆಯ ಪ್ಯಾರಾಚೂಟ್ ಮುಂತಾದುವನ್ನು ಸಂಗ್ರಹಿಸುತ್ತಲೇ ಇರುವನು.

ಬ್ಯಾಟರಿಯಿಂದ ನಡೆಯುವ ಕೈ-ರೇಡಿಯೋ, ದುರ್ಬೀನು, ದುರ್ಬೀನಿನಂತೆ ಎಳೆದರೆ ಅದಕ್ಕಾಗುವ ಕೈಕೋಲು, ರಬ್ಬರಿನ ಬಟ್ಟಲುಗಳು ತಟ್ಟೆ ಚಮಚಗಳು, ಕಾಫಿ ತಿಂಡಿಯ ಮಾತ್ರೆಗಳು, ಡಬ್ಬದಲ್ಲಿ ತುಂಬಿಟ್ಟು ಸೀಲಾದ ಬಿಸಿಬೇಳೆ ಹುಳಿ ಅನ್ನ, ಒಣಗಿಸಿ ಬಾಳಿಕೆ ಮಾಡಿದ ಹಲಸಿನಹಣ್ಣು, ಸೂರ್ಯನ ಬಿಸಿಲನ್ನು ಹಿಡಿದು ಕಾಯಿಸುವ ರವಿ-ಒಲೆಗಳು, ಡಬ್ಬದೂಟ ತಾನಾಗಿ-ಬಿಸಿಯಾಗಿಸುವ ಹಸಿ-ಸುಣ್ಣ ಕಲ್ಲಿನ ಸಾಧನ, ಹಾಲಿನ ಪುಡಿ, ಮೊಸರಿನ ಪುಡಿ, ಕಿತ್ತಳೆರಸದ ಪುಡಿ ಮುಂತಾದುವನ್ನೆಲ್ಲ ಶೇಖರಿಸಿಡುವನು.

ಭಾನುವಾರ ಬಂತೆಂದರೆ ಬೆನ್ನಿಗೆ ಕಟ್ಟಿದ ಅನ್ನಿ ಬೇಚೀಲಾನ. ಅದರಲ್ಲಿ ಸಕಲ ಸಾಮಗ್ರಿಯೂ ಇರುತ್ತಿತ್ತು. ಎರಡು ಮರಕ್ಕೆ ಕಟ್ಟಿ ಮಲಗುವ ರೇಷ್ಮೆಹುರಿ ಉಯ್ಯಾಲೆ ತೊಟ್ಟಿಲು, ಗಾಳಿ ತುಂಬುವ ಹಾಸಿಗೆ-ಚೀಲ, ಎಂಟು ದಿನಕ್ಕಾಗುವಷ್ಟು ಒಣ-ಪುಡಿ-ತಿಂಡಿಗಳು, ಮಡಿಸಿ ಜೇಬಲ್ಲಿಟ್ಟುಕೊಳ್ಳುವ ಬೈಸಿಕಲ್ಲು, ಮೇಲಕ್ಕೆ ತಾನೂ ಹೋಗಬಹುದಾದ ಆಕಾಶಬುಟ್ಟಿ, ಓದುವುದಕ್ಕೆ 'ಚಂದ್ರಪ್ರವಾಸ', 'ಎವರೆಸ್ಟ್ ಹೀರೋ', 'ಸ್ಪುಟ್ನಿಕ್ ಸಂಸಾರ' ಮುಂತಾದ ಕಿರುಪುಸ್ತಕಗಳು, ಇವನ್ನು ತುಂಬಿಕೊಂಡು ಒಂದು ಅಪೂರ್ವವಾದ ಆನಂದದಿಂದ ನಿರ್ಜನ ಪ್ರದೇಶಕ್ಕೆ ನಡೆಯುವನು. ಅಲ್ಲಿ ಒಂದು ದಿನವೆಲ್ಲ ಇದ್ದು ಸೀಟಿ ಹಾಕಿಕೊಂಡು ಸಂಜೆ ಸಿಟೀಗೆ

ಬರುವನು. ಮನೆಯಲ್ಲಿ ಮಲಗುವುದೂ ಗಾಳಿಹಾಸಿಗೆಯ ಮೇಲೆ ಗಾಳಿದಿಂಬಿನ ಮೇಲೆ ತಲೆಯಿಟ್ಟು.

ಶಂಕರ ಮೂರ್ತಿಯೂ ತೇನ್‌ಸಿಂಗೂ ಪತ್ರಮುಖೇನ ಪರಿಚಿತರು. ಒಂದಲ್ಲ ಒಂದು ದಿನ ಹಿರಿಬೆಟ್ಟ ಹತ್ತಬೇಕೆಂಬ ಹಂಬಲು. ಈಜು ಬರುವ ತನಕ ನೀರಿನ ಹತ್ತಿರ ಹೋಗುವುದು ಅಪಾಯವಷ್ಟೆ, ಹೀಗಾಗಿ ಇದ್ದ ಊರಲ್ಲೇ ತಯಾರಿ ತೆಗೆದು ಕೊಳ್ಳುತ್ತಿದ್ದನು.

ಅವನ ಆಪ್ತ ಪರಿಚಿತರನ್ನು ಕೇಳಿದೆ, "ಇವರ್‍ಯಾರು ಸಾರ್, ಯಾವಾಗಲೂ ಹ್ಯಾವರ್‌ಸ್ಯಾಕ್ ಹಾಕಿಕೊಂಡು ಹಾಯಾಗಿ ಊರ ಹೊರಕ್ಕೆ ಹೋಗುತ್ತಿರುತ್ತಾರೆ. ಇವರಿಗೆ ಏನು ಕೆಲಸ, ಕಸಬು?" ಎಂತ.

"ಆತನೇ? ಶಂಕರಮೂರ್ತಿ ಎಂತ ಹೆಸರು. ದುಡ್ಡಿದೆ ಬೇಕು ಬೇಕಾದಷ್ಟು. ಸೈನ್ಸ್ ಓದಿದ್ದಾನೆ. ಸ್ಕೌಟಾಗಿದ್ದ ಸ್ಕೂಲಲ್ಲಿ. ಇನ್ನೂ ಅದೇ ಗಿಲಿ, ಅದೇ ಒಂಟಿ ತನದ ಹುಮ್ಮಸ್ಸು. ಮದುವೆಯಾಗವಲ್ಲ—ಅದು ಯಾವ ಉನ್ನತ ಬೆಟ್ಟವನ್ನೋ ಹತ್ತಬೇಕೆಂತೆ. ಅದಕ್ಕೆ ತಯಾರಿ ತೆಗೆದುಕೊಳ್ಳುತ್ತಿದ್ದಾನಂತೆ.

"ಅವನ ಹತ್ತಿರ ಏನೇನು ಸಾಮಾನಿದೆ ಬಲ್ಲಿರಾ? ಸಕಲವೂ ಇವೆ. ಸ್ಪುಟ್ನಿಕ್‌ನಲ್ಲಿ ಸೂರ್ಯಮಂಡಲದಾಚೆ ಕಳಿಸಲು ಯೋಗ್ಯತೆಯಿದೆ!"

"ಹಾಗೇನಾದರೂ ಕಳಿಸಲ್ಪಟ್ಟರೆ ಅವರಿಗೆ ಒಪ್ಪಿಗೆಯೇ?"

"ಆಹಾ!"

"ವಾಪಸು ಬರುವ ಯೋಚನೆಯೇನಾದರೂ ಅವರಿಗಿದೆಯೇ?"

"ಆತ ಅದನ್ನು ಯೋಚಿಸಿಲ್ಲ ಇನ್ನೂ!"

"ಒಂದು ಹೆಣ್ಣನ್ನು ತಂದು ಕಟ್ಟಿಬಿಡುವುದು ತಾನೇ, ಹಿರಿಯರು–ಸ್ನೇಹಿತರು ನೇರಿಕೊಂಡು?"

ತನ್ನ ತರಹವೇ ಮನೋವೃತ್ತಿಯಿರುವ ಹೆಣ್ಣು ಇದ್ದರೆ ಬೇಕಂತೆ ಅಂಥವಳನ್ನೆಲ್ಲಿಂದ ತರುವುದು?"

"'ತನ್ನ ತರಹವೇ' ಎಂದರೆ?"

"ತನ್ನ ಹಾಗೆಯೇ ಬೆನ್ನುಚೀಲ ಕಟ್ಟಿಕೊಂಡು ಕ್ಯಾಂಪ್ ಮಾಡಲು ತಯಾರಾದ ಹೆಣ್ಣು ಬೇಕಂತೆ!"

"ಅಂಥವರು ಕಾಲೇಜುಗಳಲ್ಲಿ ಸಿಕ್ಕುವುದು ಅಂಥದೇನು ಕಷ್ಟವಿರಲಾರದಲ್ಲ?"

"ನಿಮಗೆ ಗೊತ್ತಿಲ್ಲ ಶಂಕರಮೂರ್ತಿ ವಿಷಯ. ಅವನೊಂದು ಶಂಖದ ಹುಳು!

"ಒಂದು ಹೆಣ್ಣು ಶಂಖದ ಹುಳು ತಾನೇ ಆತನಿಗೆ ಬೇಕಾದ್ದು? ಆಗಲಿ, ನಾಳೆ ಡಾರ್ಜಿಲಿಂಗಿಗೆ ಹೊರಡುತ್ತಿದ್ದೇನೆ. ಅಲ್ಲಿ ಪೆಂವೆಂ, ನೀಮಾ, ಹಿಮಾ, ಪಾರ್ವತೀ ಜಿಂಗ್ ಜಿಂಗ್ ಅಂತೆಲ್ಲ ಇದ್ದಾರೆ ಜಾತಕ ಕೊಂಚ ಕೊಡಿಸಿಕೊಡಿ!"

—ಡೊನು

ಅಪ್ಪನ ಸ್ನಾನ

—:o:—

"ಹಂಡೇಲಿ ನೀರು ಮರಳ್ಕೋಗ್ತಾ ಇದೆಯಲ್ರೋ!....ಲೋ ಶಂಕರಾ, ನಿನ್ನ ಸ್ನಾನ ಆಯ್ತೇನೋ ?"

"ಆಯ್ತಣ್ಣಾ"

"ನಿನ್ನದಾಯ್ತೇನೋ ವಿಶ್ವಾ ?"

"ಆಯ್ತು"

"ಲೇ ಉಮಾ, ನಿನ್ನದೇ ?"

"ನಿನ್ನ ಬಿಟ್ಟು ಮಿಕ್ಕೆಲ್ರೂ ಮಾಡಾಯ್ತೂ...."

"ಮತ್ತಿನ್ಯಾಕೆ ಅಷ್ಟು ಒಲೆ ಉರಿ ?....ಈ ಮನೇಗೆ ಇದ್ದಿಲು ಸೌದೆ ಪೂರೈಸ ಬೇಕಾದ್ರೆ ಜೀವಮಾನವೆಲ್ಲ ದುಡೀಬೇಕು....ಇಕನಾಮಿಕ್ಸ್ ಪ್ರೊಫೆಸರ್ ಮನೇ ಲಕ್ಷಣವೇ ಇದು ?....ನೀವೆಲ್ಲ ಮುಂದೆ ಹೇಗೆ ಸಂಸಾರ ಮಾಡ್ತೀರೊ ದೇವ್ರಿಗೇ ಗೊತ್ತು."

....

....

"ಲೇ ! ಒಂದು ತೊಟ್ಟು ಕಾಫಿ ಇದ್ರೆ ಕೊಡೆ.... ಬೆಳಿಗ್ಗೆ ಯಾಕೋ ಕುಡಿ ದ್ಹಾಗೇ ಆಗ್ಲಿಲ್ಲ ... ಕುಡ್ಕೊಂಡು ಸ್ನಾನಕ್ಹೋಗ್ತೀನಿ....ಬೇಗ ಕೊಡು".

"ಡಿಕಾಕ್ಷನ್ ಹಾಕಿದೀನಂದ್ರೆ"

....

....

"ನಾಳೇ ಬೆಳಿಗ್ಗೆ ಪರೀಕ್ಷೆ ಇಟ್ಕೊಂಡು ಕ್ರಿಕೆಟ್ ಸ್ಕೋರ್ ನೋಡ್ತಾ ಇದೀಯ ? ತೊಗೊಂಬಾ ಇಲ್ಲಿ ಆ 'ಹಿಂದೂ' ಪೇಪರ್‌ನ."

....

....

"ಬುದ್ಧೀ!"

.. ..

"ಬುದ್ದೀ! ಕೇಳಿಸಲಿಲ್ರಾ? ನಾನು, ಆಫೀಸ್ ತಿಮ್ಮಾ"

"ಹೋ! ಏನಪ್ಪ ಸಮಾಚಾರ?"

"ಭೀಮಯ್ಯನೋರು ಸಿಕ್ಕಿದ್ರು.... 'ಆಫೀಸಿಗೆ ತಡವಾಗಿ ಬರ್ತೀನಿ' ಅಂತ ಚಿಕ್ಕ ಸಾಹೇಬ್ರಿಗೆ ತಿಳಿಸ್ಬಿಡೂಂದ್ರು. ತಿಳಿಸಿ ಆಫೀಸಿಗೆ ಹೋಗೋಣಾಂತ ಬಂದೆ".

"ಹಾ! ಆಫೀಸಿಗ್ಹೋಗೋ ಟೈಮಾಯ್ತೇ ಆಗ್ಲೇ?....ನಾನು ಸ್ವಲ್ಪ ನಿಧಾನ ವಾಗಿ ಬರ್ತೀನೀಂತ ಹೇಳ್ಬಿಡು ದೊಡ್ಡ ಸಾಹೇಬ್ರಿಗೆ"

....

....

"ಲೇ!"

"ಏನೂಂದ್ರೆ?"

"ಆಫೀಸಿಗ್ಹೊತ್ತಾಗೋಯ್ತು....ಬಚ್ಚಲ್ಮನೆ ಒಲೇಗೆ ನಾಲ್ಕ್ಕೆಂಡ ಹಾಕ್ತೀಯ? ಈ ಹುಡುಗರು ತಾವು ಸ್ನಾನ ಮಾಡೋವಾಗ ಒಲೆ ಉರಿ ನೋಡ್ಕೊಳ್ಳೋ ಪದ್ಧತೀನೆ ಇಟ್ಟಿಲ್ಲ....ಇದೀವಲ್ಲ ನಾನು ಹೇಗಿದ್ರೂ ತಲೇ ಬೋಳಿಸ್ಕೊಳಕ್ಕೆ"

"ಅಯ್ಯೋ! ನೀರು ನಿಂತ್ಹೋಗಿದೆಯಲ್ಲಾಂದ್ರೆ....ಕೈಕಾಲು ತೊಳ್ಕೊಳೋ ದಕ್ಕೆ ಹಂಡೇಲಿರೋ ನೀರು ಬಿಟ್ಟರೆ ಬೇರೆ ಇಲ್ವೇ...."

"................"

—ಜಿ. ನ. ನರಹರಿ

ಅನುಭವ ಅನ್ನೋದು ಎಷ್ಟು ಉಪಯೋಗ ಅಂತೀರೀ! ಅದರಿಂದ ತಿರುಗಿ ತಪ್ಪುಮಾಡಿದಮೇಲೆ ಕೂಡಲೆ ತಪ್ಪು ಅಂತ ತಿಳಿಕೋಬಹುದು!

*　　*　　*　　*

ಮಾಡೋವಾಗ ಸಿಕ್ಕಿಹಾಕಿಕೊಳ್ಳದೇ ಇದ್ದರೆ—ಒಳ್ಳೆ ಕೆಲಸಮಾಡಿ ಏನು ಪ್ರಯೋಜನ?

ಆ "ಮ್ಯಾಜಿಸ್ಟ್ರೇಟರ ಹೆಂಡತಿ"

"ಬನ್ನಿ ಶೀಲಕ್ಕ....ನಿಮ್ಮನ್ನೇ ಕಾಯ್ತಾ ಇದೇವೆ....ಎಲೆ ಹಾಕೋದಕ್ಕೆ....ಪಾಪ ಬಸ್ಸು ಸರಿಯಾಗಿ ಸಿಗಲಿಲ್ಲವೆಂದು ಕಾಣುತ್ತೆ ..."

"ಹೋ ..ನನ್ನೊಬ್ಬಳಿಗಾಗಿ ಕಾಯ್ತಿದೀರಾ....ಬಸ್ಸು ಸರಿಯಾಗಿ ಸಿಗ್ಲಿಲ್ಲ ಕಣೇ... ಆದರೆ ಆ ಮ್ಯಾಜಿಸ್ಟ್ರೇಟರ ಹೆಂಡತಿ...."

"ಪಾಪ ಮನೆಕಡೆ ಕೆಲಸಗಳ್ನೆಲ್ಲ ತೀರಿಸ್ಕೊಂಡು ಬರೋದು ಬೇಡವೆ.... ಹೊತ್ತಾಗದಿರುತ್ಯೆ....ಬನ್ನಿ ಕೈಕಾಲು ತೊಳ್ಕೊಳ್ಳಿ...."

" ...ಆ ಮ್ಯಾಜಿಸ್ಟ್ರೇಟರ ಹೆಂಡ್ತಿ ರಾತ್ರಿ ಡ್ರಾಮಾಕ್ಕೆ ಹೋಗೋಣಾಂದಿದ್ದರು..."

"ಬನ್ನಿ....ಬನ್ನಿ.... ಎಲೆ ಹಾಕಿ ರೆಡೀ ಆಯ್ತು. ಆಗಲೇ ...ಇಗೊಳ್ಳಿ ಅರಶ್ನ ಕುಂಕ್ಮ...."

"ಆ ಮ್ಯಾಜಿಸ್ಟ್ರೇಟರ ಹೆಂಡ್ತಿ ಡ್ರಾಮಕ್ಕೆ ತಮಗೊಬ್ಬರಿಗೇ ಹೋಗೋದಕ್ಕೆ ಸರಿಯಾಗೊಲ್ಲ...."

"ಶೀಲಕ್ಕ ನೀವು ಇಲ್ಲಿ ಕೂತುಕೊಳ್ಳಿ ...ಈ ಪಕ್ಕದಲಿ ಮಗೂಗೆ ... ಛೀ ಕಳ್ಳಿ. ಎಲೆ ಬೇಕೇನೆ ಮುದ್ದು ನಿಂಗೆ....ಇಗೋ ಇದು ಪಾತೂಗೆ... ಆ ಕೊನೇ ಎಲೆ ಲಚ್ಮೀಗೆ. ಶೀಲಕ್ಕ, ಕೊಂಚ ಬಡಿಸೋದಕ್ಕೆ ಹೋಗ್ತೀನಿ ಕೊನೆಗೆ ಮಾತಾಡೋಣ....ಉಂ?"

*   *   *   *

"ನೀವೇನೇನು ನಮ್ಮ ಪ್ರೇಮನ ದೊಡ್ಡಮ್ಮನ ಮಗಳು ...ಇನ್ನೂ ಬರಲಿಲ್ಲ ಬರಲಿಲ್ಲ ಅಂತಿದ್ದರು ..."

"ಹೌದು ತಾಯಿ ನಾನೇ....ತುಂಬ ಕಾಯಬೇಕಾಯಿತೆಂದು ಕಾಣುತ್ತೆ ಎಲ್ಲಾರು....ಆ ಮ್ಯಾಜಿಸ್ಟ್ರೇಟರ ಹೆಂಡತಿ ..."

"ಪರವಾ ಇಲ್ಲ ಬಂದರಲ್ಲ..ಪೂಜೆ ಮುಗಿದುಹೋದರೂ...ಊಟಕ್ಕಾದರೂ..."

"ಊಟವೇನೂ ಮುಖ್ಯವಲ್ಲ. ನಮ್ಮ ಮ್ಯಾಜಿಸ್ಟ್ರೇಟರ ಹೆಂಡತಿ ಹೇಳಿದ್ಹಾಗೆ ಪೂಜೆ, ಅಲಂಕಾರ....ಅಂತೆಲ್ಲ ಕಣ್ಣಿಂದ ನೋಡೋದು ಮುಖ್ಯ. ಅವರು ಹೇಳಿದರು. ಊಟ ಗೀಟಾಂತ ಏನಾತುರ ಪಡ್ತೀರ. ಹೋದಮೇಲೆ ನೀವು ಬರೋದು ಹೇಗೋ. ಸಂಜೆ ಸುಖವಾಗಿ ಡ್ರಾಮಾಕ್ಕೆ ಹೋಗೋಣ. ನನಗೂ ಯಾರೂ ಜೊತೇಗಿಲ್ಲ"

"ಅಂದಹಾಗೇ ನಿಮ್ಮ ನೆಕ್‌ಲೇಸ್ ಎಷ್ಟು ಪವನನದು. ಬಹಳ ಚೆನ್ನಾಗಿದೆ ಹೊಸ ಮಾದರಿ."

* * * *

"ಶೀಲಕ್ಕನಿಗೆ ಕೊಂಚ ಪಾಯಸ ಬಡಿಸಿರೋ."

"ಸಾಕೇ ಸಾಕು....ಅ ಮ್ಯಾಜಿಸ್ಟ್ರೇಟರ ಹೆಂಡತಿ ಹೇಳಿದ್ಹಾಗೆ"

"ಇರಲಿ ಬಿಡಕ್ಕ....ಇನ್ನೊಂದು ಕಪ್ ಮಾತ್ರ"

"ಸಾಕಮ್ಮ ಸಾಕು. ಆ ಮ್ಯಾಜಿಸ್ಟ್ರೇಟರ ಹೆಂಡತಿ ಹೇಳಿದ್ಹಾಗೆ ತಿನ್ನೋದು ಬದುಕೋಕಲ್ಲ. ಬದುಕೋಕೆ ತಿನ್ನೋದಲ್ಲ....ಅಂತ. ಅದೇನೋ ಅಂದರು.... ಹಾಗೆ"

"ಬಿಡಬಾರದು ನೋಡಿ ಶೀಲಕ್ಕ. ಪಾಯಸ ಚೆಲ್ಲಬಾರದು ಅಂತಾರೆ ಹಿರಿಯರು...."

"ಆ ಮ್ಯಾಜಿಸ್ಟ್ರೇಟರ ಹೆಂಡತಿ ಹೇಳಿದ್ಹಾಗೆ"

"ಇನ್ನೊಂದೇ ಕಪ್ಪು....ಮತ್ತಿಲ್ಲ"

* * * *

"ಎಲೇಡಿಕೆ ಹಾಕ್ಕೊಂಡಿರಾ ಶೀಲಕ್ಕ...."

ಎಲ್ಲಾನೂ ಆಯಿತಮ್ಮ. ಆ ಮ್ಯಾಜಿಸ್ಟ್ರೇಟರ ಹೆಂಡತಿ ಬೇಗ್ನೆ ಬಂದ್ಬಿಡಿ ಅಂದಿದಾರೆ...."

"ಇವತ್ತೆಲ್ಲಿ ಹೋಗ್ತೀರಿ ಶೀಲಕ್ಕ. ನಾಳೆ ಬೆಳಗ್ಗೆ ಹೋಗೋದಿನ್ನು...."

"ಅಯ್ಯಯ್ಯೋ! ಛೆ ಛೆ ಛೆ! ಆಗೊಲ್ಲ ಆಗೊಲ್ಲ ಹೋಗಲೇ ಬೇಕು. ಬರ್ತೀನಿ ಅಂದಿದೀನಿ ಮ್ಯಾಜಿಸ್ಟ್ರೇಟರ ಹೆಂಡತಿಗೆ. ಕಾಯ್ತಿರ್ತಾರೆ ಅವ್ರು".

"ಇಲ್ನೋಡಿಂದ್ರೆ ಶೀಲಕ್ಕ ಈವಾಗ್ಲೇ ಹೋಗ್ತಾರಂತೆ. ಮ್ಯಾಜಿಸ್ಟ್ರೇಟರ ಹೆಂಡತಿ ಡ್ರಾಮಕ್ಕೆ ಕರೆದಿದಾರಂತೆ".

"ಓಹೋ....ಅಂ ...ಈವಾಗಲೇ ಹೋಗಬೇಕೆ?"

"ಹಾದರಪ್ಪ ಮಾತು ಕೊಟ್ಟಿದೀನಿ ಆಕೆಗೆ. ಆ ಮ್ಯಾಜಿಸ್ಟ್ರೇಟರ ಹೆಂಡತಿಗೆ ಇನ್ನೊಂದಿನ ಬರ್ತೀನಿ. ಈವಾಗ ಹೋಗ್ಲೇ ಬೇಕು ..."

Sotto Voice

"ಮ್ಯಾಜಿಸ್ಟ್ರೇಟರ ಹೆಂಡತಿ ಚಿರಂಜೀವಿಯಾಗಲಿ"

—ರಾವಿಂ

"ಶ್ರೀರಾಮನ ಗ್ರಹಚಾರ"

"ರಂಗರಾಯರಿಗೆ ಸ್ವಲ್ಪ ರಸಾಯನ! ನಿಮಗೆ ಭೀಮಣ್ಣ?....ಅರರೆ....ಕೈ ಅಡ್ಡ ತರ್ಬೇಡಿ ಹನುಮಂತಾಚಾರ್ರೆ....ಚಂದ್ರಗುತ್ತಿ ಹಲ್ಸಿನ ಹಣ್ಣು ಮನೇಲಿ ಬೆಳೆದ ಮರದ ಹಣ್ಣು ಸ್ವಾಮಿ....ಜೊತೆಗೆ ನಂಜನಗೂಡು ರಸಬಾಳೆ....ಕಾಬೂಲ್ ದ್ರಾಕ್ಷಿ. ಜೇನುತುಪ್ಪ ಕಲ್ಲುಸಕ್ಕರೆ....ಬಾದಾಮಿ, ಗೋಡಂಬಿ, ದ್ರಾಕ್ಷಿ, ಪಚ್ಚ ಕರ್ಪೂರ, ಕೇಸರಿ....ಏನುಂಟು ಏನಿಲ್ಲ....ಏನೊ ನನ್ನ ಯೋಗ್ಯತೆಗೆ ತಕ್ಕಂತೆ ಹದ ವಾಗಿ ಮಾಡ್ಸಿದ್ದೇನೆ ಸ್ವಾಮಿ........ಸ್ವೀಕರ್ಸಿ....ನಿಮಗೆ....ಸಾವಿತ್ರಿ!....ಇಲ್ಲಿ ಸ್ವಲ್ಪ ಪಾನಕ ಕೇಳು....ಬೇಡ ಅನ್ನಬಾರದು ಸ್ವಾಮಿ....ಬೇಲದಹಣ್ಣಿಂದು ಟಾನಿಕ್ ಇದ್ದಹಾಗೆ ಈ ಕಾಲಕ್ಕೆ..." ಒಳ್ಳೆ ರಾಮನವಮಿ ಅತಿಥಿಗಳ ಸತ್ಕಾರದಲ್ಲಿ ರಂಗಣ್ಣ ನವರು ನಿರತರಾಗಿದ್ದಾಗ ಅವರ ಮನೆ ಜಗಲಿ ಹತ್ತಿದೆ....ನನ್ನ ಕಂಡವರೇ........ ಸೀಕರ್ಣೆ ತಪ್ಪಲೇ ಸಮೇತ ಓಡಿಬಂದರು ಬಾಗಿಲಿಗೆ....

ಬಾ, ಬಾ, ರಾಮಣ್ಣ....ನಿನ್ನೇ ಎದುರು ನೋಡುತ್ತಿದ್ದೆ....ಯಾಕೆ ಬೇರೆ ಯಾರನ್ನೂ ಕರ್ಕೊಂಡ್ಬರ್ಲಿಲ್ಲವಲ್ಲ?"

"ಯಾರೂ ಮನೇಲಿ ಇಲ್ಲ ರಂಗಣ್ಣ....ತೌರುಊರಿಗೆ ಮಕ್ಕಳನ್ನೆಲ್ಲಾ ಕರ ಕೊಂಡು ಹೋಗಿದ್ದಾರೆ...."

"ರಾಮನವಮಿಗೂ ತೌರೂರೇ! ಒಳ್ಳೆಯದಾಯಿತು, ನೀನಾದರೂ ಬಂದೆ ಯಲ್ಲ"

ಸಾವಿತ್ರಮ್ಮನವರೂ ಧನಿಗೂಡಿಸಿದರು. ಈ ದಂಪತಿದ್ವಯರಿಗೆ, ಶ್ರೀರಾಮ ನವಮಿ ಅಂದರೆ ತೀರಿತು, ಅದೆಷ್ಟು ಜನರಿಗೆ ಆತಿಥ್ಯ ನಡೆಸಿದರೂ ತೃಪ್ತಿ ಸಾಲದು. ಇಡೀ ರಾಜೀವಪುರವೇ ಅವರ ಮನೆ ಜಗುಲಿಮೇಲೆ ಸೇರಿತ್ತು. ಹಾಗೇ ಬಂದು ಭೀಮಣ್ಣನವರ ಪಕ್ಕದಲ್ಲಿ ಕುಳಿತೆ. ಅವರಿಗೂ ತಮ್ಮಯ್ಯನವರಿಗೂ ರಾಮೋತ್ಸವ ವಿಚಾರದಲ್ಲಿ ಸ್ವಲ್ಪ ವಾದ ಸಾಗುತ್ತಿತ್ತು....

"ನೀವೇನಾದರೂ ಹೇಳಿ ಭೀಮಣ್ಣ....ನಮ್ಮವರು ಈ ರಾಮನವಮಿ ಕಾಲ ದಲ್ಲಾದರೂ ನಾಲ್ಕು ರಾಮನಾಮ ಹೇಳಿ, ಕೆಲವು ಹರಿಕಥೆ–ಸಂಕೀರ್ತನೆ ಕಿವಿಗೆ ಹಾಕಿಕೊಳ್ಳುತ್ತಾರಲ್ಲ, ಅಷ್ಟೇ ಸಾಕು. ಅಜಾಮಿಳ ಸಾಯುವಾಗ ತನ್ನ ಮಗನ್ನ ನೆನ್ಸಿಕೊಂಡಿದ್ದಕ್ಕೆ ಸ್ವರ್ಗವೇ ದೊರೆಯಿತು. ಅದ್ಯಾಕೆ ವಾಲ್ಮೀಕಿ....ರಾಮನಾಮ ಸಹ ಮಾಡಲಿಲ್ಲ, ಮರ ಮರ ಅನ್ನುವುದಕ್ಕೆ ಶುರುಮಾಡಿದ್ದು ರಾಮನಾಮವಾಗಿ ಎಂಥಾ ಜ್ಞಾನಿಯಾಗಲು ಕಾರಣವಾಯ್ತು. ಅಂಥಾದ್ದರಲ್ಲಿ..."

"ನಾವು ಅರಿತು ರಾಮನಾಮ ಜಪಿಸಿದರೆ ಅರಿಯದೆ ಮಾಡಿದ ಅವರಿಗಿಂತ ದೊಡ್ಡವರಾಗಬಹುದು ಅಲ್ಲವೆ ತಮ್ಮಯ್ಯ" ರಸಾಯನದ ದೊನ್ನೆ ಖಾಲಿ ಮಾಡಿದ ಭೀಮಣ್ಣ ಈಕಡೆ ತಿರುಗಿದರು.

"ನೋಡಿ ತಮ್ಮಯ್ಯ ಈ ಕಲಿಯುಗದಲ್ಲಿ ಇಂಥ ಅನಾಹುತವಾಗಬಾರದೊಂತಲೇ ಮುಂದಾಲೋಚನೆ ಮಾಡಿದ ವಾಮನ ಬಲಿಚಕ್ರವರ್ತಿ ಜಾಡ್ಯ ಇನ್ನೊಬ್ಬರಿಗೆ ಹರಡುವ ಮುನ್ನವೇ ಭೂತಳಕ್ಕೆ ಮೆಟ್ಟಿದ್ದು. ಅಂಥಾದ್ದರಲ್ಲಿ ನಾವು ಅವರ ಮಟ್ಟದ ಯೋಚನೆ ಮಾಡುವುದೇ ಪಾಪಕರ ನನ್ನ ಕೇಳಿದರೆ...."

"ಹಾಗೆ ಹೇಳಬಾರದು ಭೀಮಣ್ಣ... ಯಾವ ಕಾರ್ಯಕ್ಕಾಗಲಿ ಒಟ್ಟಿಗೆ ಸೇರದ ಜನ ರಾಮೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ನೇರುತ್ತಾರೆ....ಭಕ್ತಾದಿಗಳು ಹಾಗೆಲ್ಲಾ ಪ್ರಚಾರ ಮಾಡಿಕೊಳ್ಳುವುದಿಲ್ಲ ಎಲೆ ಮರೆ ಕಾಯಂತೆ ಇದ್ದು ಬಿಡುತ್ತಾರೆ"

"ಇಂಥ ಒಂದು ಉತ್ಸವ ಏರ್ಪಟ್ಟಾಗ ಅಧಿಕ ಸಂಖ್ಯೆಯಲ್ಲಿ ಗೋಚರಿಸುತ್ತಾರೆ"

"ಹೌದು"

"ಕೊಪ್ಪದ ಕಪ್ಪಣ್ಣ ಗೊತ್ತಿಲ್ಲ ನಿಮಗೆ"

"ಕೇಳಿಬಲ್ಲೆ"

"ಅವರ ಮನೆ ರಾಮೋತ್ಸವದಲ್ಲಿ ಇಡೀ ಕೊಪ್ಪವೇ ಅವರ ಮನೆ ಬಾಗಿಲಲ್ಲಿ"

"ಏಕೆ ?"

"ಅವರ ಮನೆ ಸೀಕರ್ಣೆ ಅಷ್ಟು ಪ್ರಸಿದ್ಧಿ. ನೋಡಿ! ದೇವರ ದಯ ಮಂಗಳಾರತಿ ಆದಮೇಲೆ ಪ್ರಸಾದ....ಪ್ರಸಾದ ಹಂಚಿ ಮಂಗಳಾರತಿ ಮಾಡುವಂತಿದ್ದರೆ ... ಕಪ್ಪಣ್ಣನವರ ಕುಟುಂಬ ಬಿಟ್ಟು ಅದನ್ನು ತೆಗೆದುಕೊಳ್ಳಲು ನಿಲ್ಲುವವರು ಯಾರು ಸ್ವಾಮಿ ? ಎಲ್ಲಾ ಭ್ರಾಂತು"

ಅಷ್ಟುಹೊತ್ತಿಗೆ ತಮ್ಮ ಕೆಲ್ಸ ಪೂರೈಸಿದ ರಂಗಣ್ಣನವರೂ ಬಂದು ಕುಳಿತರು...

"ಭೀಮಣ್ಣ ಈಗಿನ ಕಾಲದಲ್ಲಿ ರಾಮನ ಮೇಲೆ ಭಕ್ತಿಯಿಂದ ರಾಮೋತ್ಸವ ನಡೆಸುವವರು, ರಾಮನಾಮ ಜಪಿಸಲು ಅಲ್ಲಿ ಭಕ್ತಿಯಿಂದ ಸೇರುವವರು ಯಾರಿದ್ದಾರೇಂತೀರಿ ?....ಮೊನ್ನೆ ಆ ಸರ್ಕಲ್ ಮಂದಿರಕ್ಕೆ ಹೋಗಿದ್ವಲ್ಲ – ಹರಿಕಥೆ ದಾಸರು ಇನ್ನೂ ಮಂಗಳ ಹಾಡುತ್ತಿದ್ದಂತೆ....ರಾಮನಿಗೆ ಮಂಗ್ಳಾರ್ತಿ ಆಗತ್ತೆ ನಿಲ್ಲಿ ನಿಲ್ಲಿ" ಅಂತ ಮೈಕ್‌ನಲ್ಲಿ ಸಂಚಾಲಕರು ಅರಚುತ್ತಿದ್ದರೂ....ಅವರ ಪಾಡಿಗೆ ಅವರು ನಿರ್ಗಮಿಸುವುದನ್ನು-ನಿಲ್ಸಿದ್ರೆ ?"

"ಅದೆಲ್ಲಾ ಇರ್ಲಿ ರಂಗಣ್ಣ ...ನೀನು ದೊಡ್ಡದಾಗಿ ಶಂಕುಸ್ಥಾಪನೆ ಮಾಡಿದ್ಯಲ್ಲ– ತೊಂಡೆಭಾವಿಲಿ ರಾಮಮಂದಿರಕ್ಕೆ ...ಅದನ್ನ ಹೇಳು ಸ್ವಲ್ಪ ತಮ್ಮಯ್ಯನವರಿಗೆ.... ನಮ್ಮ ಭಕ್ತಕೋಟಿಯ ಅರಿವಾಗುತ್ತೆ ಅವರಿಗೆ"

"ಅಂದ್ಹಾಗೆ ತಮ್ಮಯ್ಯ! ನನಗೆ ತೊಂಡೆಭಾವಿಗೆ ವರ್ಗವಾದಾಗ, ಅಲ್ಲಿ ಜನವೆಲ್ಲಾ ನಾಸ್ತೀಕರೇನೋ ಅಂತಿದ್ದೆ. ಆದರೆ ಆ ವರ್ಷ ರಾಮನವಮೀನ.... ಊರಿನ ಮುಖ್ಯಸ್ಥರನ್ನೆಲ್ಲಾ ಕರೆದು ನನ್ನ ಕೈಲಾದಷ್ಟು ದರ್ಜೆಯಲ್ಲಿ ನಡೆಸಿದೆ. ಪೇಟೆಗಳ ಕಡೆ ಇದ್ದು ಇಲ್ಲಿನ ರಾಮೋತ್ಸವಗಳನ್ನು ನೋಡಿ ಬಂದಿದ್ದ ತರುಣ ಪಟೇಲ್ ತಮ್ಮಣ್ಣ ನಮ್ಮಲ್ಲೂ ಮುಂದಿನ ವರ್ಷ ದೊಡ್ಡದಾಗಿ ರಾಮೋತ್ಸವ ಮಾಡಬೇಕು ಅಂತ ಎಲ್ಲರಿಗೂ ತಿಳ್ಸಿ... ಅದರ ಏರ್ಪಾಡಿನ ಭಾರ ನಾನು ಎಷ್ಟು ಬೇಡವೆಂದರೂ ನನ್ನ ತಲೆಗೆ ಕಟ್ಟಿದರು...."

ಮಾರನೇ ವರ್ಷ ತಮ್ಮಣ್ಣನವರೇ ಮುಂದಾಗಿ ನಿಂತು ಎಲ್ಲಾ ಏರ್ಪಾಡನ್ನೂ ಖುದ್ದು ತಮ್ಮ ಮೇಲ್ವಿಚಾರಣೆಯಲ್ಲಿ ನಡೆಸತೊಡಗಿದರು. ಒಂದೊಂದು ದಿವ್ಸದ ಖರ್ಚು ಒಬ್ಬೊಬ್ಬ ಪಟೇಲರು ವಹಿಸುವುದೆಂದು, ಕಡೆ ದಿವ್ಸದ ತೇರಿನ ಖರ್ಚು ಎಲ್ಲರೂ ಒಟ್ಟಾಗಿ ಹಾಕಿಕೊಳ್ಳುವುದೆಂದೂ ತೀರ್ಮಾನವಾಯ್ತು. ಬಂದವರಿಗೆ ವಸತಿ, ಬಸ್ ಸೌಕರ್ಯಗಳು ಏರ್ಪಾಡಾಯಿತು....ಸುತ್ತುಮುತ್ತಲಿನ ಹಳ್ಳಿಗಳಿಂದ ಹಾಲುಮೊಸರಿನ ಸರಬರಾಜಿಗೆ ವ್ಯಾನ್‌ಗಳನ್ನು ಗೊತ್ತುಮಾಡಲಾಯ್ತು. ಸ್ಪೆಷಲ್ ಅಡಿಗೆಯವರನ್ನು ಉಡುಪಿಯಿಂದಲೇ ಕರೆಸಿದರು. ಲಕ್ಷ ಜನ ಬರಲಿ, ಒಬ್ಬರಿಗೂ ಸ್ವಲ್ಪವೂ ಅನಾನುಕೂಲವಾಗಬಾರದು. ಆ ರೀತಿ ವ್ಯವಸ್ಥೆ ಮಾಡಿದರು.

ದೇಶದ ನಾನಾ ಭಾಗಗಳ ಸಂಗೀತ ವಿದ್ವಾಂಸರು, ಪಕ್ಕವಾದ್ಯದವರು, ಓಲಗದವರು, ಹರಿಕಥ ಸುಕೀರ್ತನಕಾರರು, ಪಂಡಿತೋತ್ತಮರು, ವೇದಪಾರಂಗತರು, ಪುರಾಣೀಕರು, ಗಮಕ ವಿದ್ವಾಂಸರುಗಳು ಎಲ್ಲರಿಗೂ ಆಹ್ವಾನ ಹೋಯಿತು. ತರುಣರ ಅಭಿಲಾಷೆಯಂತೆ ವಿಖ್ಯಾತ ಸಿನಿಮಾ ತಾರೆಯರ ನೃತ್ಯವೂ ಏರ್ಪಾಡಾಯಿತು....ಇನ್ನೇನು ಬೇಕು ಶ್ರೀರಾಮನಿಗೆ?...."

"ಯೋಗ ರಂಗಣ್ಣ....ತನ್ನ ಜೀವ ಮಾನವೇ ಕಾಡಿನಲ್ಲಿ ಮಂಗಗಳ ಜೊತೆ ಕಳೆದು....ನಂತರ ಸುಖಪಡುವ ಕಾಲದಲ್ಲಿ ಪತ್ನೀನ ಕಾಡಿಗೆ ಕಳ್ಸಿ....ಪರಿತಪಿಸುತ್ತಿದ್ದ ಶ್ರೀರಾಮ....ಈಗ ಈ ಪೋಟವಾಗಿ ಅನುಭವಿಸುತ್ತಾನಲ್ಲ ..ಅಷ್ಟೇ ಸಾಕು!"

"ಮುಖ್ಯಮಂತ್ರಿಗಳಿಂದ ಆರಂಭಿಸಲ್ಪಟ್ಟು, ಪ್ರತಿದಿನ ಒಬ್ಬೊಬ್ಬ ಮಂತ್ರಿಗಳನ್ನೂ ಅಧ್ಯಕ್ಷತೆಗೆ ಕರೆಸಲಾಯ್ತು. ಒಬ್ಬರನ್ನು ಮೀರ್ಸಿ ಇನ್ನೊಬ್ಬರ ಏರ್ಪಾಡು ....ಕುಬೇರನ ಮಕ್ಕಳು ಕೇಳಬೇಕೆ?....ಯಾವ ಪತ್ರಿಕೆ ನೋಡಲಿ; ತೊಂಡೆಭಾವಿ ರಾಮೋತ್ಸವದ ವಿಚಾರವಾಗಿ ಭಾರಿಭಾರಿ ಲೇಖನ....ಒಂದು ವಿಶೇಷ ಸಚ್ಚಿತ್ರ ಪತ್ರಿಕೆಯನ್ನೇ ಮುದ್ರಿಸಿ ಎಲ್ಲರ ಭಾವಚಿತ್ರಗಳನ್ನೂ ಹಾಕಿ ದೇಶದ ಎಲ್ಲಾ ಕಡೆಗೂ ರವಾನಿಸಲಾಯ್ತು. ಒಟ್ಟಿನಲ್ಲಿ ಕಾಗೋಡಿನಂತೆ ತೊಂಡೇಭಾವಿ ಭಾರತದಲ್ಲೇ ಪ್ರಸಿದ್ಧಿಯಾಯಿತು".

"ಕಡೇ ದಿನದ ರಥ ನೋಡಬೇಕು ತಮ್ಮಯ್ಯ ...ಗಂಧದ ಮರದಲ್ಲಿ ಕೆತ್ತಿಸಿದ ರಥ ವಿದ್ಯುದ್ದೀಪಗಳಿಂದ ಅಲಂಕೃತವಾಗಿ ಬರುತ್ತಿದ್ದರೆ ...ದೇವಲೋಕವೇ ಇಳಿದಂತಿತ್ತು .."

"ನಂತರ ನನಗೂ ರಿಟೈರ್ ಆಯ್ತು. ಆದರೆ ದ್ವಿತೀಯ ವಿಘ್ನವಾಗಬಾರದೆಂದು ತಮ್ಮಣ್ಣನ ಅಭಿಲಾಷೆಯಂತೆ ಒಂದು ವರ್ಷ ಎಕ್ಸ್‌ಟೆರ್ಷನ್ ಪಡೆದು ಕೆಲ್ಸ ಮಾಡಲು ಒಪ್ಪಿದೆ. ಆದರೆ ಮಾರನೇ ವರ್ಷ, ಪಂಚಾಯ್ತಿ ಚುನಾವಣೆ ವಿಚಾರದಲ್ಲಿ, ಛೇರ್ಮನ್ ನಾಗಪ್ಪನಿಗೂ, ಪಟೇಲ್ ತಮ್ಮಣ್ಣನಿಗೂ ಸ್ವಲ್ಪ ಮನಸ್ತಾಪವಾಗಿ ... ಅದು ರಾಮೋತ್ಸವ ಕಾಲಕ್ಕೆ ವಿಕೋಪಕ್ಕೆ ಹೋಯಿತು. ಆದರೆ ತಮ್ಮಣ್ಣ ಮಾಮೂಲಿನಂತೆ ಸ್ಕೂಲ್ ಮೈದಾನದಲ್ಲಿ ಎಂದಿನಂತೆ ಚಪ್ಪರ ವಗೈರೆ ಹಾಕಿಸಿ ಎಲ್ಲರಿಗೂ ಮುಂದಿನ ಏರ್ಪಾಡಿನ ಬಗ್ಗೆ ಹೇಳಿ ಕಳ್ಸಿದರು....ನಾಗಪ್ಪ ಮತ್ತು ಅವನ ಅನುಯಾಯಿಗಳು ಬರಲೇ ಇಲ್ಲ ನಂತರ ನಾನೇ ಖುದ್ದು ಹೋದಾಗ .. ಮಿಲ್ಸ್ ಮೈದಾನದಲ್ಲಿ ಭಾರಿ ಚಪ್ಪರದ ಏರ್ಪಾಡಾಗುತ್ತಿತ್ತು.... ನಾನು "ಸುಮ್ಮನೆ ಯಾಕೆ ಎರಡು ಉತ್ಸವ ನಾಗಪ್ಪ ...ಒಂದಾಗಿ ಮಾಡೋಣ" ಎಂದು ಸ್ವಲ್ಪ ಸಮಾಧಾನ ಹೇಳ ಹೋಗಿದ್ದಕ್ಕೆ....ಆತ....

"ನೋಡಿ ಮೇಷ್ಟ್ರೆ ಇದು ನನ್ನ ಗೌರವದ ಪ್ರಶ್ನೆ. ನೀವೇ ಮುಂದೆ ನಿಂತು ನಡೆಸಿ ಕೊಡಬೇಕು .. ನೀವು ತಮ್ಮಣ್ಣನ ಪರ ಕೃಷ್ಣರಾಯಭಾರಕ್ಕೆ ಬರುವುದು ಒಳ್ಳೆಯದಲ್ಲ....ನೀವೇನಾದರೂ ಅಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಗೊತ್ತಾದರೆ ಗುಂಡು ಹಾರಿಸಿಬಿಡುತ್ತೇನೆ, ಹುಷಾರಾಗಿರಿ...." ಎಂದು ಕೋವಿ ತೋರಿಸಿದರು.... ನಾನು ತೆಪ್ಪನೆ ಹಿಂತಿರುಗಬೇಕಾಯ್ತು ...

"ಇಂಥ ಕುರಿಗಳು ಬಹಳ ನೋಡಿಯಾಯ್ತು ಮೇಷ್ಟ್ರೆ ...ನಿಮ್ಮೆದುರಿಗೇ ನೋಡ್ತಿರಿ ...ಏಕಾಪೋಶನ ತೆಗೆದುಕೊಳ್ಳುತ್ತೇನೆ....ನೀವೇನೂ ಹೆದರಬೇಡಿ........ ಕೋವಿ ಎತ್ತೋ ತಾಕತ್ತು ಅದಕ್ಕೆಲ್ಲಿ ಬಂತು ..." ಎಂದು ಧೈರ್ಯ ಹೇಳಿದರು. ಆದರೆ ನನಗೆ ಶರೀರವೇ ಕಳಚಿ ಬೀಳುವಂತಾಯ್ತು ...ರಾತ್ರಿ ನಿದ್ರೆಯೇ ಬರಲಿಲ್ಲ .. ಕಣ್ಣು ಮುಚ್ಚಿದರೆ ಕೋವಿ ಕಾಣುತ್ತಿತ್ತು ...ಭೀಮಣ್ಣ! ಅಲ್ಲಿ ಆಗ ದಫೇದಾರ ಶಾನು ಭೋಗರನ್ನು ಹಿಡಿದು, ಪಾಪ ರಾತ್ರಿ ಅವರ ಗಾಡಿ ಕಟ್ಸಿ ಬೆಳಗಾಗುವುದರಲ್ಲಿ ಊರು ತಲ್ಪಿ, ಮಾರನೇ ದಿನವೇ ಡಾಕ್ಟರನ್ನು ಹಿಡಿದು ಸರ್ಟಿಫಿಕೇಟ್ ಮಾಡ್ಸಿ ರಿಟೈರ್ ಆಗುವವರೆಗೆ ರಜ ಪಡೆದೆ, ನಂತರದ ಕಥೆ ನೀನು ಹೇಳು ಭೀಮಣ್ಣ"

"ಅಂದ್ಹಾಗೆ ನಿನ್ನ ಗೈರುಹಾಜರಿ ಆದ ಮಾರ್ನೆದಿನ ತಮ್ಮಣ್ಣ, ನಾಗಪ್ಪ ಎಲ್ಲೋ ನಿಜವಾಗಿ ಕೋವಿ ಹಾರ್ಸಿ ಕೊಂದುಬಿಟ್ಟನೊ ಎಂದು ಸ್ಟೇಷನ್‌ಗೆ ಬಂದಿದ್ದು ಕಂಪ್ಲೇಂಟ್ ಮಾಡಿದ. ನಾನು ತಿಳಿದಿದ್ದರೂ ತಿಳಿಯದವನಂತೆ ಇದ್ದು, ವಿಚಾರಿಸು

ವುದಾಗಿ ತಿಳ್ಸಿ ಕಳ್ಸಿದೆ. ರಾಮೋತ್ಸವ ಬಹಳ ಪೈಪೋಟಿಯಲ್ಲಿ ನಡೆಯಿತು. ತಮ್ಮಣ್ಣ ಸ್ಥಳೀಯ ಮುಖ್ಯಮಂತ್ರಿಗಳನ್ನು ಕರ್ಸಿದರೆ, ನಾಗಪ್ಪ ಕೇಂದ್ರ ಮಂತ್ರಿಗಳನ್ನೇ ಕರ್ಸಿದ. ಭಾರಿ ಪ್ರಮಾಣದಲ್ಲಿ ಎಲ್ಲಾ ವ್ಯವಸ್ಥೆ ನಡೆಯಿತು. ಆದರೆ ಕಡೇದಿವ್ಸ ತೇರು. ಆ ದಿನ ನಾಗಪ್ಪ ಮತ್ತು ಅವನ ಅನುನಾಯಿಗಳು ತೇರು ತಮಗೆ ಬರಬೇಕೆಂದೂ, ತಾವೂ ಅದಕ್ಕೆ ಚಂದಾ ಹಾಕಿರುವುದಾಗಿ ಸ್ವಾಧೀನ ಪಡಿಸಿಕೊಳ್ಳಲು ಬಂದರು. ತೇರು ತಮ್ಮಣ್ಣನ ಸ್ವಾಧೀನವಿದ್ದದ್ದರಿಂದ ಬಿಟ್ಟುಕೊಡಲಿಲ್ಲ. ದೊಂಬಿ ಜಗಳ ಶುರುವಾಗಿ ನಮ್ಮ ಕೈಲಿ ಪರಿಸ್ಥಿತಿ ಹತೋಟಿಗೆ ತರಲಾಗಿದೆ, ರಿಸರ್ವ್ ಪಡೆ ಕರ್ಸುವುದರೊಳಗೆ ನಾಲ್ಕೈದು ಜನ ಪರಂಧಾಮ ಸಂದಿದ್ದರು. ಈಗ ನೋಡಿ, ತೇರು ನೋಡಿದರೆ ಸಂಕಟವಾಗುತ್ತೆ. ಬಿಸಿಲು ಮಳೆ ಎನ್ನದೆ ಪ್ರಾಣದೇವರ ದೇವಸ್ಥಾನದ ಬಾಗಿಲಲ್ಲಿದೆ, ಗೆದ್ದಲಿಗೆ ಆಹಾರವಾಗಿ. ಉತ್ಸವಮೂರ್ತಿ, ಪಾಪ! ಪ್ರಾಣದೇವರ ದೇವಸ್ಥಾನದಲ್ಲಿದೆ....ಅರ್ಚಕ ಹನುಮಂತಾಚಾರ್ರ ಅರ್ಧಾಣೆ ಕರ್ಪೂರದಲ್ಲಿ ಬೆಳಕು ಕಾಣುತ್ತಾ ...ಕೇಸು ಈಗ ಸುಪ್ರೀಂ ಕೋರ್ಟಿಗೆ ಹೋಗಿದೆ".

"ಅದೆಲ್ಲಾ ರಂಗಣ್ಣ....ಮನುಷ್ಯನಾದರೇನು, ಮೃಗವಾದರೇನು? ದೇವರ ವಿಗ್ರಹವೇ ಆದರೇನು? ದಶಾನಾಥನ ಅನುಗ್ರಹವಾದರೆ ಹೊಡೆದು ಬಾರಿಸುತ್ತೆ ರಾಜಯೋಗ. ಇಲ್ಲವೇ ಹೀಗೆ" ನಾಗಾಜೋಯ್ಸರು ತಮ್ಮ ಜ್ಯೋತಿಷ್ಯದ ತೀರ್ಮಾನ ಹೇಳಿದರು.

ಭೀಮಣ್ಣನವರು ಏಳುತ್ತಾ "ಬೇಜಾರ್ಮಾಡ್ಬೇಡಿ ತಮ್ಮಯ್ಯ. ಈಗಿನ ರಾಮೋತ್ಸವದ ಏರ್ಪಾಡೆ ಹಾಗೆ. ಪಾಪ! ಒಟ್ಟಿನಲ್ಲಿ ರಾಮನಿಗೆ ಗ್ರಹಚಾರ" ಎಂದು ಎದ್ದರು. ಗೆಲುವಿನ ಮಂದಹಾಸ ಮುಖದಲ್ಲಿ ಮೂಡಿತ್ತು. ಬರ್ತೀನಿ.... ನಮಸ್ಕಾರ.

—"ರಾಮಸ್ವಾಮಿ"

—o—

ತೆಪ್ಪಗಿದ್ದರೆ ಮಂಕ ಅನ್ನಬಹುದು ಜನ, ಆದರೆ ಬಾಯಿಬಿಟ್ಟರೆ ಜನ ಅಂದು ಕೊಂಡಿದ್ದು ದಿಟವೆಂದು ಗೊತ್ತಾಗಬಹುದು!

* * * *

ಮಲಗು ಮಲಗೆಲೆ ಬೊಂಬೆ	ಅಳಬೇಡವೆಂಬೆ
ಅಪ್ಪಟೊಪ್ಪಿಯ ಹಾಕ್ಕೊಂಡು	ಹೊರಕ್ಕೆ ಹೋಗಿವ್ರೆ
ಬರುವಾಗಬೆಣ್ಣೆ ಹಣ್ಣು	ಕಾಳುಕಾಸು ತರ್ತೋವ್ರೆ
ಮಲಗೆದ್ದು ಬೆಳೆದಾರೆ	ಮಾರಿಮಾಶೆ ಬಂದಾಗೆ
ಅಪ್ಪನಂತೆ ನೀನೂಕೂಡ	ಟೊಪ್ಪಿತೊಟ್ಟು ಹೊರಹೊರಟು
ಬರುವಾಗ ಚಪ್ಪರಿಸಿ,	ಹಣಹೊನ್ನು ತರುವೀಯಂತೆ!

❋ "ಕೇಳು ಜನಮೇಜಯ" ❋

ನಾಟಕ-ಬರೆದವರು **ಶ್ರೀರಂಗ**-ಶ್ರೀರಂಗ, ಸಾರಸ್ವತ ಪ್ರಕಾಶನ-ಬೆಲೆ **ರೂ. ೧-೫೦**

೧) ನಾಟಕದ ವಸ್ತು

ಮೊದಲ ಅಂಕ: ಅನುಭವವೇ ಹಿರಿದು ಎಂದು ಹೆಮ್ಮೆಪಡುವ ಮುದುಕ, ಉತ್ಸಾಹವೇ ಪ್ರಗತಿಗೆ ಅವಶ್ಯಕವೆಂಬ ಯುವಕ, ತನಗಲ್ಲದೆ, ತಾನಿಲ್ಲದೆ, ಏನು ತಾನೆ, ಯಾರಿಂದ ತಾನೆ ಮಾಡಲ್ಪಡುತ್ತದೆ ಎಂದು ಮನವರಿತ ತರುಣಿ, ಬದುಕುವ ರೀತಿಯನ್ನು ಸಹ-ಜ-ವಾಗಿ ಅರಿತ ಸಾಮಾನ್ಯಪ್ಪ—ಈ ನಾಲ್ವರ ಅಂತರಂಗದ ಚಿತ್ರ—

ಎರಡನೆಯ ಅಂಕದಲ್ಲಿ: ಈ ನಾಲ್ವರ ಸಾಮಾಜಿಕ ಬಹಿರಂಗ ನಡೆವಳಿಕೆಯ ದೃಶ್ಯಗಳು ತರುಣಿಯು ಅಂದುಕೊಂಡಿದ್ದರಲ್ಲಿ ಮೂಲಭೂತ ಸತ್ಯವಿದೆ ಎಂದು ತೋರಿಸುತ್ತದೆ. ಕಡೆಗೆ ತರುಣಿಯು ಯಾರ ಕೈಸೇರುತ್ತಾಳೆ? ನಾಟಕ ಓದಿ!

ಮೂರನೆಯ ಅಂಕಿನಲ್ಲಿ: ವಿಚಾರ:- ಚಮತ್ಕಾರದಿಂದ ಏರು ಪೇರನ್ನು ತೋರಿಸುವ ದೃಶ್ಯ, ತಿಳಿದವರಿಗೆ ನಗೆಯು ಬರುವಂತಹ ಸನ್ನಿವೇಶಗಳು, ಮಿಂಚಿನ ಬಿಲ್ಲಿನಿಂದ ಬಿಟ್ಟ ಮಾತಿನ ಬಾಣಗಳು, ಗುಡುಗಿನ ಮಾತುಗಳಿಂದ ಹೇಳಿದ ಜೋ! ಜೋ!

೨. ವಿಮರ್ಶೆ ಕೇಳು ಜನಮೇಜಯ ಧರಿತ್ರೀಪಾಲ—

—ವಿದುರನ ಬೋಧೆಯು ಅಂಧ ನೃಪಾಲನ ಅಂತಃಕರಣ ಶುದ್ಧಿಯನು ನೆಯ್ದಿದ ರೀತಿಯನು—ಆತ್ಮವಿದ್ಯೆಯು, ಮೂಲಮಂತ್ರಾಕ್ಷರದ ಬೀಜವನು—ಆಗ ವಿದುರನು ಹೇಳಿದ. ಕೇಳಿದವರಾರು? ಆಯಿತೇನು? ಕುರುಕ್ಷೇತ್ರ!!

ಇಂದು, ಜನಮೇ—ಜಯ! ಎಂದು ಕೂಗೆದ್ದು ಜನರೇ ತಮ್ಮ ಅಚ್ಚುಮೆಚ್ಚಿನ ನಾಯಕರ ಮೂಲಕ ಧರಿತ್ರೀಪಾಲರಾಗಿದ್ದಾರೆ. ಇಂದು ನೃಪಾಲರೂ ಅಂಧರೇ! ಸರಿ!

ವಿದುರರು ಚತುರತೆಯಿಂದ ನಾಲ್ವರ ಪಾತ್ರಗಳ ಕೈಲಿ ನಾಟಕವಾಡಿಸಿ ಅಂತಃಕರಣ ಶುದ್ಧಿಯನು ನೆಯ್ಯಲು ಪ್ರಯತ್ನಿಸುತ್ತಿದ್ದಾರೆ—ಆದ್ಯ ಪ್ರಯತ್ನ—

ಸುತ್ಯ ಪ್ರಯತ್ನ. ಮಾನವನ ಚರಿತ್ರೆಯಲ್ಲಿ ಈ ವಿದುರನೀತಿಯು ಪರಂಪರೆಯಾಗಿ ಬಂದಿದೆ. ವಿಚಾರವಂತರಿಗೆ ಸುಗ್ಗಿ. ಓದಿ, ನೋಡಿದವರಿಗೆ ಹಬ್ಬ—

ಆದರೆ ಇದರಿಂದ ಜನಮೇ, ಜಯ ಎಂದು ಹೇಳಿ ಜನನಾಯಕರಾಗಿ ಅಂಧ ನೃಪಾಲರಾಗಿರುವವರ ಮೇಲೆ ಪರಿಣಾಮವೇನಾಗಬಹುದು ಎಂದು ಕೇಳಿದರೆ ಚರಿತ್ರೆಯ ಕಡೆಗೆ ಬೆರಳು ತೋರಿಸಿ "ಕುರುಕ್ಷೇತ್ರ" ಎನ್ನಬೇಕು?

ಅಂಧರಿಗೆ ಜೀವನ-ನಾಟಕ ಕಾಣಿಸುವುದಾದರೂ ಹೇಗೆ?.

* * * ?

ಆದರೆ ಈ ನಾಟಕದ ಉಪಯೋಗ, ಅಹಂ-ಅಂಧ, ನೃಪಾಲರಿಗಲ್ಲ. ಅಹಂ ಕಳೆದುಕೊಂಡ, ಹಾಗೂ ಕಳೆದುಕೊಳ್ಳಲು ಬಯಸಿದ, ಅರಿತ ಯುವಕರಿಗೆ—ಅಂತಹವರ ಸಂಖ್ಯೆ ಭಾರತದಲ್ಲಿ ಹೆಚ್ಚಾಗುತ್ತಿರುವುದರಿಂದ—ಈ ನಾಟಕ ಬಲು ಪ್ರಯೋಜನಕಾರಿಯಾಗಬಹುದು ಅಲ್ಪಸಂಖ್ಯಾತರಿಗೆ—ಹೌದಾ?

ವಯೋಮಿತಿ ಇನ್ನೂರು ವರ್ಷಗಳಾದಾಗ

— ೦ —

ಒಬ್ಬರಿಗೆ ವಿಷವಾದದ್ದು ಇನ್ನೊಬ್ಬರಿಗೆ ಅಮೃತ. ಒಬ್ಬರನ್ನು ಆನಂದಸಾಗರದಲ್ಲಿ ತೇಲಾಡಿಸುವ ಸುದ್ದಿ ಬೇರೊಬ್ಬರಿಗೆ ಹೊಟ್ಟೆಯಲ್ಲಿ ಚಳಿ ಮೂಡಿಸಬಹುದು. ಇತ್ತೀಚೆಗೆ ಒಬ್ಬ ಸೋವಿಯೆಟ್ ವಿಜ್ಞಾನಿ ಮನುಷ್ಯ ಜೀವಿತದ ಕಾಲವನ್ನು 150 ರಿಂದ 200 ರವರೆಗೆ ಹೆಚ್ಚಿಸಬಹುದೆಂದು ಭರವಸೆ ಕೊಟ್ಟಿದ್ದನ್ನು ಕೇಳಿ ಶೀನಪ್ಪ ಸುಸ್ತಾದ. ಅವನ ಚಿಕ್ಕಪ್ಪ—ಕಾಯಕಲ್ಪದ ಅಧ್ವರ್ಯು—ಸುದ್ದಿ ಕೇಳಿದ ಮೇಲೆ ಹೊಸ ಹುರುಪು ಪಡೆದಿದ್ದಾನೆ.

ಚಿಕ್ಕಪ್ಪ ಬರ್ಮಾದ ಕಡೆ ಕಂಟ್ರಾಕ್ಟು ಮಾಡಿ ದೊಡ್ಡ ಗಂಟು ಕಟ್ಟಿದಾನೆ. ಬಿಗಿ ಮುಷ್ಟಿ. ಮಕ್ಕಳಿಲ್ಲ. ಶೀನಪ್ಪ ಗುಮಾಸ್ತೆ. ಕೈ ಬರಿದು ಪದಾತಿ ಸೈನ್ಯದಷ್ಟು ಮಕ್ಕಳು. ಚಿಕ್ಕಪ್ಪನ ಅನುಗ್ರಹಕ್ಕಾಗಿ ಕಾಯುತ್ತಿದ್ದಾನೆ. ಕಷ್ಟವೆಂದರೆ ಚಿಕ್ಕಪ್ಪನ ಜೀವವಿರುವವರೆಗೆ ಅವನ ತಿಂಗಳ ಊಟದ ಖರ್ಚಿನಷ್ಟು ಅನುಗ್ರಹ ಮಾತ್ರ. ಶೀನಪ್ಪ ಪೂರ್ಣಾನುಗ್ರಹದ ದಿನವನ್ನು ಕಾಯುತ್ತಾ ಉಸಿರು ಹಿಡಿದು ಬದುಕುತ್ತಿರುವಾಗ ಈ ವಿಜ್ಞಾನಿಗಳು ಆಯುಷ್ಯವೃದ್ಧಿಯ ಅಧಿಕಪ್ರಸಂಗಕ್ಕೆ ತೊಡಗಿದ್ದಾರೆ. ಇನ್ನೇನು ಗತಿ ಎಂದು ಪೆಚ್ಚಾಗಿದಾನೆ ಶೀನಪ್ಪ.

ಪ್ರತಿಯೊಂದು ನರ ಹುಳುವೂ 150–200 ವರ್ಷ ಬದುಕಿದರೆ ಈ ಭೂಲೋಕದ ಗತಿಯೇನೋ ಎಂದು ಗೋಳಿಡುತ್ತಾನೆ ಶೀನಪ್ಪ.

"ಗತಿ ಏನೂ ಆಗೋದಿಲ್ಲ ಕಣಯ್ಯ. ಬದುಕಿನಲ್ಲಿ ಸ್ವಾರಸ್ಯ ಹೆಚ್ಚುತ್ತೆ. ಮೆರುಗು ಕೊಡತ್ತೆ ಈಗ ಮನುಷ್ಯ ನೂರು ವರ್ಷಗಳ ಗಡಿಯಲ್ಲಿರುವಾಗಲೆ ಸಿಲ್ವರ್, ಗೋಲ್ಡನ್, ಡೈಮಂಡ್ ಜೂಬಿಳಿಗಳ ಸುಗ್ಗಿ. ಇನ್ನು ಇನ್ನೂರರ ತನಕ ಹಲ್ಲುಕಟ್ಟಿ ಬಾಳಿದರೆ ಆಗ ವರ್ಧಂತ್ಯುತ್ಸವಗಳಿಗೆ ಕೊನೆ ಮೊದಲಿಲ್ಲವಾಗುತ್ತೆ" ಎಂದರೂ ಶೀನಪ್ಪನಿಗೆ ಸಮಾಧಾನವಿಲ್ಲ. ಆತನಿಗೆ ಎಲ್ಲಿಲ್ಲದ ಶಂಕೆ.

ವಯೋಮಿತಿ ಇಷ್ಟು ಕಡಮೆಯಿರುವಾಗಲೇ ಪ್ರಪಂಚ ಬೋರುಗಳಿಂದ ತುಂಬಿದೆ. ಯಾವುದಾದರೊಂದು ವೃತ್ತಿಯನ್ನೋ ಉದ್ಯೋಗವನ್ನೋ ಹಿಡಿದು, ಅದರಲ್ಲೇ ಮುಳುಗಿ, ಮೈಮರೆತು, ಕಣ್ಣಿಗೆ ಕಪ್ಪು ಕನ್ನಡಕ ಕಟ್ಟಿಕೊಂಡು ಓಡುವ ಟಾಂಗಾ ಕುದುರೆಯಂತೆ ಬಾಳುತ್ತಿರುವ ಮಂದಿ ವಯಸ್ಸು ನಲವತ್ತೆಂಬತ್ತರಲ್ಲಿಯೇ ಅಸಾಧ್ಯ ಬೋರುಗಳಾಗಿ ಬಿಡುತ್ತಾರೆ. ಇನ್ನು ನೂರೈವತ್ತು ಇನ್ನೂರು ವರ್ಷಗಳಾಗುವಾಗ ನಾವೆಲ್ಲ ಎಂಥ ಬೋರುಗಳಾದೇವು. ಬೋರುಗಳಿಂದ, ಭ್ರಾಂತು ಹಿಡಿದವ

ರಿಂದ, ನಾನಾ ಮಟ್ಟದ ಹುಚ್ಚು ತಗಲಿದರಿಂದ ತುಂಬಿದ ಈ ಪ್ರಪಂಚದಲ್ಲಿ ಬಾಳು ಅಸಹನೀಯವಾಗದೇ ಎಂದು ವಾದಿಸುತ್ತಾನೆ ಶೀನಪ್ಪ.

"ಅದಕ್ಕೇ ಕಣಯ್ಯ ಬೇರೆ ಗ್ರಹಗಳಲ್ಲಿ ತಳವೂರೋದಕ್ಕಾಗಿ ವಿಜ್ಞಾನಿಗಳು ಪ್ರಯತ್ನಿಸೋದು" ಎಂದರೆ ಆತ ಗ್ರಹ ಗ್ರಹಗಳಲ್ಲಿಯೂ ಹುಚ್ಚಾಸ್ಪತ್ರೆಗಳು ತುಂಬಿ ಹೋಗುತ್ತವೆ ಎಂದು ಕೆಟ್ಟ ಭವಿಷ್ಯ ನುಡಿಯುತ್ತಾನೆ. ದೇಹದ ಬಿಡಿ ಭಾಗಗಳು ಕೆಟ್ಟು ಹೋದರೆ ಹೊಸ ಭಾಗಗಳನ್ನು ಜೋಡಿಸಿ ದುರಸ್ತಿಪಡಿಸಿ ವಯೋಮಾನ ಹೆಚ್ಚಿಸುತ್ತಾರಲ್ಲ ವಿಜ್ಞಾನಿಗಳು, ಆದರೆ ತಲೆ ಬುರುಡೆಯೊಳಗಿನ ನಾಲ್ಕು ತೊಲೆ ಪದಾರ್ಥ ಹಳಸಿ ಹೋದರೆ ಗತಿಯೇನು ಎನ್ನುತಾನೆ ಶೀನಪ್ಪ.

"ಆದರೆ ನಿನ್ನ ಶತ್ರುಗಳಾದ ಮಿತಸಂತತಿ ಜನನಿಯಂತ್ರಣ ಪ್ರಚಾರಕರು ಬೇಸ್ತು ಬೀಳುತ್ತಾರಲ್ಲ ಅದೊಂದು ಸಂತೋಷದ ವಿಷಯವಲ್ಲವೇ ಎಂದಾಗ ಶೀನಪ್ಪನ ಮುಖ ಅರಳಿತು. "ಆಗ ಅವರು ಸಂಪೂರ್ಣ ಜನನ ನಿರೋಧ ಪ್ರಚಾರವನ್ನ ಕೈಕೊಳ್ಳಬೇಕಾಗುತ್ತದೆ" ಎಂದು ನಕ್ಕ ಶೀನಪ್ಪ. ಆದರೆ ಏನನ್ನೋ ನೆನಸಿಕೊಂಡು ಅರೆ ಕ್ಷಣದಲ್ಲಿ ಅವನ ನಗು ಮಾಯವಾಯಿತು.

ಧೂರ್ತರೂ ರಾಕ್ಷಸ ವರ್ಗದವರೂ ಈ ಹೆಚ್ಚಿದ ವಯೋಮಿತಿಯಿಂದ ಭಟ್ಟಿ ಇಳಿಸಿದ ದೈತ್ಯರಾಗಿ ಲೋಕವನ್ನು ಹಿಂಡುತ್ತಾರಲ್ಲೋ ಎಂದು ನಿಟ್ಟುಸಿರು ಬಿಟ್ಟ ಶೀನಪ್ಪ. ಆತನ ಕಣ್ಣಿಗೆ ಸಾವಿಲ್ಲದ ದೈತ್ಯನಾಗಿ ಕಂಡಿದ್ದು ಯಾರೆಂದು ನನಗರಿಯದೆ?

"ದೈತ್ಯರ ಸಮಾಚಾರವಿರಲಿ, ನಾನು ನೀನು ಒಂದು ನೂರೈವತ್ತು ವರ್ಷಗಳ ಕಾಲವಾದರೂ ಬದುಕಬೇಡವೇನೋ" ಎಂದು ಕೇಳಿದೆ.

"ನನಗಂತೂ ಖಂಡಿತವಾಗಿ ಆಸೆ ಇಲ್ಲ" ಎಂದು ಬಿಟ್ಟ ಶೀನಪ್ಪ.

"ಒಂದು ವೇಳೆ ಚಿಕ್ಕಪ್ಪನಿಗೂ ಬದುಕು ಸಾಕೆನಿಸಿದರೆ.?

"ಆಗ ನೋಡೋಣಂತೆ" ಎಂದು ಮೂಗುಜ್ಜಿದ ಶೀನಪ್ಪ—ಕೊರವು.

ಏನೆನ್ನಿಸಿತೋ "ನೂರು ವರ್ಷ ಬಾಳಯ್ಯ" ಎಂದು ಆಶೀರ್ವದಿಸಿದ ನನ್ನನ್ನ.

ಆದರೆ ವಯೋಮಿತಿ ಇನ್ನೂರಾದಾಗ "ನೂರು ವರ್ಷ ಬಾಳು" ಎಂದರೆ ಅದು ಆಶೀರ್ವಾದ ಹೇಗಾಗುತ್ತದೆ? ಆಗ ಹಾಗನ್ನುವುದು ಶಾಪವೇ ಸರಿ।

—ರಾಮಿ

ಬಾಗಿಲಿಗೆ ಬಂದವರು

“ ಸಾರ್....ಸಾರ್....ಸ್ವಾಮಿ....ಒಳಗಿದೀರ ”

“ ಇದೀವಿ....ಇದೀವಿ....ಏನಾಗಬೇಕಾಗಿತ್ತು.”

“ ಸ್ವಲ್ಪ ಬಾಗಿಲು....ತೆಗಿತೀರ....”

“ ಬಾಗಿಲು ತೆಗೆಯೋಕೆ ಆಗುಲ್ಲವಲ್ಲ .. ನಮಗೆ ಜ್ವರ....ಮಲಗಿದೇವೆ ”

“ ಜ್ವರವೆ....ಅಯ್ಯೋ ಪಾಪ ! ನಾವು ...ವೋಟರ್ಸ್‌ಲಿಸ್ಟಿನವರು ...”

“ ವೋಟರ್ಸ್‌ಲಿಸ್ಟಿನವರಾದರೆ ಏನಂತೆ? ನಾವು ಇನ್ನು ಮೇಲೆ ಯಾರಿಗೂ ಓಟು ಮಾಡುಲ್ಲ ...ಬೇಕಾದ್ರೆ ನೆಹ್ರೂಗೇ ಹೇಳಿ ಹೋಗಿ ! ”

“ ಹಾಗೇ ಆಗ್ಲಿ....ಹೇಳ್ತೀವೆ ! ನಿಮ್ಮನೇಲಿ ಗ್ರ್ಯಾಜುಯೇಟುಗಳು ಎಷ್ಟು ಜನ ಇದಾರೆ ಎಂಬೋದನ್ನ ನೀವು ಹೇಳ್ತೀರ ? ”

“ ನಮ್ಮನೇಲಿ ಗ್ರ್ಯಾಜುಯೇಟುಗಳು ಈಗ ಯಾರೂ ಇಲ್ಲ ...ಒಬ್ಬ ಇದ್ದ.... ಅವನು ಹೋದ ತಿಂಗಳೇ ನೇಣ್ ಹಾಕ್ಕೊಂಡುಬಿಟ್ಟ....ಹಾಲಿ ಇರೋರೆಲ್ಲಾ ಇ. ಪಿ. ಎಸ್. ಗಳು !....ಹೋಗ್ಬಿಟ್ಟು ಬನ್ನಿ ! ”

* * * *

“ ಸಾರ್....ಸಾರ್....ಸಾರ್ ”

“ ಏನು ಹಿಂದು ಹಿಂದೇ ಕೂಗುಕೊಳ್ತಿದೀರಲ್ಲ ”

“ ನಾವು ಸೆನ್ಸಸ್‌ನವರು ಸಾರ್....ನಿಮ್ಮನೇಗೆ ನಂಬರ್ ಹಾಕ್ತೀವೆ ”

“ ಹಾಕಿ ! ಅದಕ್ಕೆ ಸಾರ್ ಏಕೆ ? ”

“ ಸಾರ್....ಒಳಗಿದೀರೋ ಇಲ್ಲವೋ ಅಂತ ತಿಳಕೊಳ್ಳೋಕೆ ಸಾರ್ ! ”

“ ಹಾಗೋ ! ಎಷ್ಟನೆ ನಂಬರು ಹಾಕ್ತೀರ ”

" 28ನೆ ನಂಬರು ಹಾಕ್ತೀವೆ ಸಾರ್ "

" ಕಾಶಿಪತಿ ಮನೇಗೆ ಎಷ್ಟನೆ ನಂಬರು ಹಾಕಿದೀರ ? "

" ....78 ಸಾರ್ "

" ಯಾಕೆ ಹಾಗೆ ಮಾಡಿದ್ರಿ ! ಕಾಶೀಪತಿ ಮನೇಗೇ 28ನೇ ನಂಬರು ಹಾಕಿದ್ದರೆ ನಿಮ್ಮಪ್ಪನ ಮನೆ ಗಂಟು ಏನು ಹೋಗ್ತಿತ್ತು ...ಅಲ್ಲೂ ದೊಡ್ಡಸ್ತಿಕೆ !"

" ಛೆ! ಛೆ! ಖಂಡಿತ ಇಲ್ಲ ಸಾರ್ ! ನಾವು ಪಶ್ಚಿಮದಿಂದ ಪೂರ್ವಕ್ಕೆ ನಂಬರು ಹಾಕ್ಕೊಂಡು ಹೋಗ್ತಿದೇವೆ ಸಾರ್ "

" ಅದಕ್ಕೇ ಹೇಳೋದು ...ತಲೆಕೆಳಗಿನ ಸರ್ಕಾರ ಅಂತ ! ಪೂರ್ವದಿಂದ ಪಶ್ಚಿಮಕ್ಕೆ ಹೋಗ್ಬೇಡ ಅಂತ ಯಾರಾದರೂ ನಿಮಗೆ ಹೇಳಿದ್ದರೇನು ? ಸಾಕ್ಷಾತ್ ಸೂರ್ಯದೇವನೇ ಹಾಗೆ ಮಾಡೋವಾಗ ನಿಮ್ಮದೇನ್ರೋ ಮಹಾ ! "

" ಇನ್ನು ಮುಂದೆ ಹಾಗೇ ಮಾಡ್ತೀವೆ ...ಈಗ ಹೋಗ್ತೀವೆ "

" ಹೋಗಿ ! ಹೋಗಿ ! ಯಾರು ಬೇಡ ಅಂತಾರೆ ? ! "

* * * *

" ಸಾರ್....ಸಾರ್....ಸಾರ್ "

" ನಿಮಗೇನು ಮಾಡೋಕೆ ಬೇರೆ ಕಸುಬಿಲ್ಲವೇನ್ರೋ....ಯಾಕೆ ಹೀಗೆ ಬಿಸಲಿನಲ್ಲಿ ಗೋಳ್ಹುಯ್ದುಕೊಳ್ತೀರ ? "

" ಕೋಪಿಸ್ಕೋಬೇಡಿ ಸಾರ್....ನಾವು ಕೆಲವು ಅಂಕಿ ಅಂಶಗಳನ್ನು ಶೇಖರಿಸೋಕೆ ಬಂದಿದೇವೆ ಸಾರ್...."

" ಏನು ನಿಮ್ಮ ಕಷ್ಟ ...ಅಲ್ಲಿಂದಲೇ ಬಡ್ಕೋಬಹುದಲ್ಲ ! "

"ಸಾರ್....ತಮಗೆ ಕರಿದ ಪದಾರ್ಥಗಳನ್ನು ಕಂಡ್ರೆ ತುಂಬಾ ಇಷ್ಟವೇನ್ಸಾರ್?"

" ನಿನಗ್ಯಾಕೋ ಅದು ? ನಮ್ಮ ಬೀಗರು ಕಡೆಯವನೇನೋ ನೀನು ? "

" ನಿಮ್ಮ ಬೀಗರು ಯಾರು....ಸಾರ್ ? "

" ಕೊಣನೂರ್ ವೆಂಕಟಪತಿ ಗೊತ್ತಿಲ್ವೇನೋ ! ಕೋಡು ಬಳೆ ಸರಾನ ಯಾವಾಗ್ಲೂ ಗೂಟಕ್ಕೆ ತಗುಲ್ಹಾಕಿರ್‍ತಾನೆ ! "

" ಕೋಣನೂರು ವೆಂಕಟಪತಯ್ಯನವರು ನಮಗೆ ಚೆನ್ನಾಗಿ ಗೊತ್ತು ಸಾರ್.... ಈ ವರ್ಷ ಅವರು ನಮ್ಮ ಕಂಪಿನೀಲಿ 10 ಟನ್ ವನಸ್ಪತಿ ತುಪ್ಪಾನ ಕೊಂಡು ಕೊಂಡ್ರು ಸಾರ್....! ತಮಗೆ ಎಷ್ಟು ಡಬ್ಬ ಕೊಡ್ಲಿ ಸಾರ್!"

" ವನಸ್ಪತಿ ತುಪ್ಪಾನೆ!.... ಯಾವನೋ ಅವನು.... ಹೋಗ್ತೀಯೋ ಇಲ್ಲವೋ! ಬೇಕೂ....!"

* * * *

" ಸಾರ್.... ಸಾರ್.... ರೀ.... ರೀ.... ಒಳಗ್ಯಾರಾದ್ರೂ ಇದೀರಾಮ್ಮ"

" ರೀ.... ರೀ.... ಒಳಗ್ಯಾರಾದ್ರೂ.. ಇದೀರಾಮ್ಮ ಅಂತ ಹೊರಗೆ ಕೂಗ್ತಾ ಇರೋರು ಯಾರಮ್ಮ!"

" ಹೊರಗೆ ಕೂಗ್ತಾ ಇರೋರು.... ಯಾರಮ್ಮ.. ಅಂತ ಒಳಗೇ ಮಲಕ್ಕೊಂಡು ಮಾತು ನುಂಗ್ತಾ ಇರೋರು ಯಾರಪ್ಪ!"

" ಅಯ್ಯೋ ದೇವರೆ! ಇದೆಂಥ ಹೆಂಗುಸಪ್ಪ!.... ಯಾರಮ್ಮ ನೀವು? ನಮ್ಮನೇಲಿ.... ಕರಿಬೇವಿನ ಸೊಪ್ಪಿನ ಗಿಡ ಇಲ್ಲ.... ಹೋಗ್ತೀರ!"

" ಇನ್ನೆಂತ ಗಿಡ ಇದೆ ಹಾಗಾದ್ರೆ"

" ಈ ವರ್ಷ ಗಿಡಗಳನ್ನ ಹಾಕ್ಬೇಕು ಅಂತ ಇದೀವಿ.... ಗುದ್ದಲಿ, ಬಕೀಟು ಎಲ್ಲಾ ತರಿಸಿದೀವಿ.... ಹೋಗ್ಬಿಟ್ಟು ಬನ್ನಿ"

" ಹೋಗ್ತೀವೆ ನಮ್ಮ ಕೆಲಸ ಮಾಡ್ಕೊಂಡು.... ಇಲ್ಲೇ ಇರೋಕೆ ನಾವೇನು ಬಂದಿಲ್ಲ!"

" ಹಾಗೆ! ಯಾವುದಾದರೂ ಸರ್ಕಾರಿ ಕೆಲಸದ ಮೇಲೆ ಬಂದಿದೀರಾ!"

" ಹೌದು.... ನಮ್ಮದು ಹೆಲ್ತ್ ಡಿಪಾರ್ಟ್‌ಮೆಂಟು.. ನಿಮ್ಮನೇಲಿ ಮಲೇರಿಯ ಜ್ವರದಿಂದ ಎಷ್ಟು ಜನ ನರಳ್ತಾ ಇದೀರ ಅಂತ ಹೇಳಿದ್ರೆ ಬರ್ಕೊಂಡು ಹೋಗ್ತೀವಿ!"

" ನಮ್ಮನೇಲಿ ಎಲ್ಲರಿಗೂ ವಾಸಿ ಆಗೋಯ್ತು ಬೇಕಾದ್ರೆ ಕಾಶಿಪತೀ ಮನೇಲಿ ಎಂಟು ಜನಕ್ಕೆ ಮಲೇರಿಯ.... ಕರ್ಕೊಂಡು ಹೋಗಿ!

" ನಿಮ್ಮನೇಲಿ ನಿಮ್ಮೊಬ್ಬರಿಗೇನೋ ಮಲೇರಿಯ.... ಒಬ್ಬರಿಗೆ ಮಾತ್ರ ಈ ಮನೇಲಿ ಜ್ವರ ಅಂತ ಬರ್ಕೊಳ್ತೀನಿ!"

" ಬೇಡ ಬೇಡ! ಮಲೇರಿಯ ಏನಲ್ಲ ನನಗೆ ... ಡಯ್ಯೋರಿಯಾ!"

—ಹಾ. ರಾ.

ಗಾಂಪರ ಗುಂಪು

“AII ಕಟಾಂಜನದಲ್ಲಿ”

ಬೊಂಬಾಯಿ ಸಾಂಟಾಕ್ರೂಸ್ ವಿಮಾನನಿಲ್ದಾಣದಲ್ಲಿ ಗಾಂಪರೊಡೆಯರು ಶಿಷ್ಯರೊಡನೆ, ಕೃಷ್ಣಾಜಿನದ ಚೀಲ—ಕುಂಬಳಕಾಯಿ, ಹಳದೀ ಥಮಾರ್ಕ್‌ಟ್ರಂಕು ಇತ್ಯಾದಿ ಕಸಕಡ್ಡಿಗಳ ಗುಪ್ಪೆ ಹೊತ್ತ ಗಾರ್ದಪದಂತೆ ಶೋಭಿಸುತ್ತಾ ಏರ್ ಇಂಡಿಯಾ ಇಂಟರ್ ನ್ಯಾಷನಲ್ ಕಂಪನಿಯ ಕೌಂಟರ್ ಸೇರಿದಾಗ ಆ ಏ.ಐ.ಐ. ನೌಕರ ‘ ಐ! ಐ! ಐ! ’ ಎಂದೆನ್ನುತ್ತದ್ದಂತೇ ಮೂರ್ಛೆ ಹೋದುದು ಸರಿಯಷ್ಟೆ. ಹಾಗೆ ಬಿದ್ದವನನ್ನು ಎತ್ತಿ ಆಸ್ಪತ್ರೆಗೆ ಹಾಕಿ ಹಿರಿಯ ಅಧಿಕಾರಿಯೇ ಈ ಘನ ಪ್ರಯಾಣಿಕರನ್ನು ವಿಚಾರಿಸಲು ಧೈರ್ಯಮಾಡಿದ.

ಪ್ರಯಾಣಿಕರನ್ನು ಬಹು ಮರ್ಯಾದೆಯಿಂದ ಗಂಭೀರವಾಗಿ, ವಿನಯ ಪೂರ್ವಕವಾಗಿ ವಿಚಾರಿಸಿಕೊಳ್ಳಬೇಕೆಂಬ ತನ್ನ ಕಂಪನಿಯ ನಿಯಮವನ್ನು ತ್ರಿಕರಣ ಪೂರ್ವಕವಾಗಿ ಪಾಲಿಸುತ್ತಿದ್ದ ಆ AII ಹಿರಿಯನೂ, ಬಲವಂತದಿಂದ ಉಕ್ಕಿ ಬರುತ್ತಿದ್ದ ನಗುವಿನ ಅಲೆಗಳನ್ನು ಅದುಮಿ ಹಿಡಿದು ಗಾಂಪರನ್ನು ಸ್ವಾಗತಿಸಿದ.

ಆತನಿಗೆ ಈ ನಿಯೋಗ ಯಾವುದು? ಎಂದು ಗೊತ್ತಾಗಲಿಲ್ಲ. ಆದರಿಂದಾಗಿ “ಕ್ಷಮಿಸಬೇಕು ತಾವು ಶಿಂಗಳೀಕ ಸಾಧು ಸಂಘದ ಸದಸ್ಯರೇ?”—ಎಂದು ಕೇಳಿದ. ಗಾಂಪರೊಡೆಯರು ಗಂಭೀರವಾಗಿ “ಇಲ್ಲ” ಎಂದು ತಲೆ ಆಡಿಸಿದರು.

“ಹಾಗಾದರೇ ಗಯಾಪರವರ್ದಿಗಾರ ಫಕೀರರ ಪಂಗಡವೆ?”

“No sorry—” ಎಂದು ನಕ್ಕ ಮಂಕ.

“Then ಯಾ ದಂಡಕಾರಣ್ಯ ದಂಡ ಪಿಂಡ ಸನ್ಯಾಸಿಗಳೇ?”

“ಹಿ ಹಿ .. ಹಾಗೆ ಕಂಡರೂ ನಾವು ಅವರಲ್ಲ”

“ಮತ್ಯಾರಿರಬೇಕು? ಗಾಂಜಾ ಗುಳುಂ ಗಂಗಾ ಮಾಯಿ ಗುಂಪೆ?”

“ಗಾಂ... ನಿಜ ಹಾಗೇ ಊಹಿಸಿ ಹೇಳಿ ನೊಡೋಣ”

“ಗಂಗೊಳ್ಳಿ ಗುಜ್ಜಾರ ಮಠ?”

“ಗುರುಗಳೇ ‘ಗಾಂ’ ಬಂತು ‘ಮಠ’ ಬಂತು—ನಾವು ನಿಜಕ್ಕೂ ಲೋಕ ಪ್ರಸಿದ್ಧರು ಗುರುಗಳೇ” ಮಡೆಯನ ಕೂಗು.

“ಮಡೆಯಾ—ಮಂಡೆಯೊಡದೇನು ಮರುಳಾ ಅವನ ಬಾಯಿ ಮುಚ್ಚು”

—ಎಂದಾಗ AII ಅಧಿಕಾರಿ ಕೆಕ್ಕರಿಸಿ ನಕ್ಕ. ತಾನು ಮೊದಲು ಊಹಿಸಿದ್ದೇ ಸರಿ ಅನ್ನುವಂತೆ ಹಿಗ್ಗಿದ.

“ಹಾ ಹಾ—ಮಡೆಯ, ಮರುಳ—‘ಗಾಂ’ ಮಠ ಸರಿಸರಿ ಗಾಂಪರ ಮಠದವರು ತಾವು—ಸರಿಯೇ”

" ಕರೆಕ್ಟ್....ಪರವಾಗಿಲ್ಲ....ನೀವೂ ಬುದ್ಧಿವಂತರೇ—ನಮ್ಮನ್ನು ನೋಡಿದೊಡನೇ ನಿಮಗೆ ತಿಳಿಯುತ್ತದೆಂದು ಊಹಿಸಿದ್ದವು....ಅನೇಕರು ನಮ್ಮನ್ನು-ಯಾಕೆ ನಮ್ಮ ಶಿಷ್ಯರಲ್ಲಿ ಯಾರನ್ನು ನೋಡಿದೊಡನೇ ಗಾಂಪರಮಠದವರೆಂದು ಹೇಳುತ್ತಾರೆ – ಅಂಥಾದ್ದರಲ್ಲಿ ಗಾಂಜ—ಮಠ ಸೇರಿಸಿ ನಮ್ಮ ಗುಂಪನ್ನು ಗುರ್ತಿಸಿದಿರಲ್ಲಾ.... ಆದಕ್ಕಾಗಿ ನಮ್ಮ ಮಠದಪರವಾಗಿ ಶುಭಾಶಯಗಳು"

" ಹಿ ಹಿ....ದೊಡ್ಡವರ ಆಶೀರ್ವಾದ ನನಗೆ AIIನಲ್ಲಿ ಖಂಡಿತ ಭಡ್ತಿ ದೊರೆಯುತ್ತೆ.. ಅದಿರಲಿ....ಕುಂಬಳಕಾಯಿ—ಕಂಬಳಿ ಹಾಸಿಗೆ—ಚಾಪೆ ಸುರುಳಿ—ಹಳದಿ ಢಮಾರ್ ಟ್ರಂಕು ಹ ಹ ಇದೆಲ್ಲಾ ಲಂಡನ್ನಿಗೆ ಒಯ್ಯಲು ಯಾವ ಕತ್ತೆ ಮೇಲೆ ಹೇರಿಕೊಂಡು ಬಂದಿರಿ ?"

—ಡಕೋಟಾದಲ್ಲಿ ತೊಳಲಾಡಿ ವಾಂತಿಮಾಡಿ ಬೊಂಬಾಯಿಯಲ್ಲಿ ಬಿದ್ದಾಗ ಆದ ಆ ಸಂಕಟ ಮೈನೋವು ನೆನೆದಾಗ 'ಆ' ಕತ್ತೆಯಲ್ಲೇ ಎಂದು ದೂರದಲ್ಲಿ ಕಿಟಕಿಯಿಂದ ಕಾಣುತ್ತಿದ್ದ ಡಕೋಟಾ ಆಕಾಶ ಲಾರಿಯನ್ನು ತೋರಿಸುವ ಮನಸ್ಸಾಯಿತು. ಆದರೆ ಗುರುಗಳು ಹಾಗೇ ತಮ್ಮ ಮಠಕ್ಕೆ ಜಿಗಣೆಯಂತೆ ಅಂಟಿ ಬಂದ ಶಿಷ್ಯವರ್ಗವನ್ನು ಆಳವಾಗಿ ನೋಡಿದರು.

ಮರುಳ ಪಳಪಳ ಹೊಳೆವ ಮೊಸಾಯಿಕ್ ನೆಲದ ಮೇಲೆ ಮಲಗಿದ್ದ ಮಂಕ ನಿಂತೇ ತೂಕಡಿಸುತ್ತಿದ್ದ. ಮಡೆಯ ಅಲ್ಲಿರಲೇ ಇಲ್ಲ—ಆಚೆ ವಿಶ್ರಾಂತಿಪಡೆವ ಲೌಂಜಿನಲ್ಲಿ ಸೊಂಟಕ್ಕೆ ಕೈಬಳಸಿದ ದೊರೆ—ದೊರೆಸಾನಿಯರಿಬ್ಬರ ಪ್ರೇಮವನ್ನು ವೀಕ್ಷಿಸುತ್ತಿದ್ದ. ಮುರ್ಕ್ಳ ಕುಂಬಳಕಾಯಿ ಹೊತ್ತ ಹೆಗಲನ್ನು ಮುಟ್ಟಿಮುಟ್ಟಿ ನೋಡಿಕೊಳ್ಳುತ್ತಿದ್ದ. 'ಈ ಕತ್ತೆಗಳ ಮೇಲೇ ಹೇರಿಕೊಂಡು ಬಂದದ್ದು' ಎಂದೆನ್ನುವ ಅರ್ಥಪೂರ್ಣ ಪಕ್ಷಿನೋಟ ಬೀರಿದರು ಆ ಶಿಷ್ಯರ ಕಡೆಗೆ.

ಆ AII ನೌಕರ ...ನಮ್ಮ ಪುಣ್ಯ ಇವರನ್ನು ಸಾಗಿಸುತ್ತಿದ್ದೇವೆ ಎಂದುಕೊಂಡು

" ಸ್ವಾಮಿ—ತಾವು ತಾಜಮಹಲಿಗೆ ಹೋಗಿ ತಂಗುವಿರೋ—ಅಥವ ಇಲ್ಲಿಯೇ ಮೇಲಿರುವ ಮಹಡಿಯ ರೂಮೊಂದರಲ್ಲಿ ಆರಾಮವಾಗಿ ರಾತ್ರಿವರೆಗೂ ತಂಗುವಿರೋ" ಎಂದು ಕೇಳಿದ.

"ಮಂಕಾ... ತಾಜಮಹಲಿಗೆ ಹೋಗೋಣವೆ ?"

—ಮಂಕ ತಬ್ಬಿಬ್ಬಾದ. ಹಳೆಯ ಕಾಲದಲ್ಲಿ ಓದಿದ ಚರಿತ್ರೆ ನೆನಪಿಗೆ ಬಂತು. ನೂರ್‌ಜಹಾನಳೆಂಬ ಸುಂದರಿಗಾಗಿ ಕಟ್ಟಿಸಿದ ಪ್ರೇಮದ ನೆನಪಿನ ಮಹಲು ಅದು. ತಾನು—"ಓ ವೆಂಕಟಲಕ್ಷ್ಮೀ ಹೇಗೆ ನಿನ್ನ ಗರುಡಮೂಗನ್ನು ಮರೆಯಲಿ ! ಆ ಹುಲಿ ಉಗುರಿನಂತಹ ಹಲ್ಲನ್ನು ಹೇಗೆ ಬಿಟ್ಟು ವಿದೇಶಕ್ಕೆ ಹೋಗಲಿ" ಎಂದು ತನ್ನ ಪ್ರೇಯಸಿ ವೆಂಕಟಿಯನ್ನು ನೆನಪಿಗೆ ತಂದುಕೊಂಡು ಪ್ರೇಮದ ಕುರುಹಾಗಿ ಅವನ ತೊಡೆಯ ಮೇಲೆದ್ದ ಕುರುವನ್ನು ನೆನೆಯುತ್ತಾ,

"ಗುರುಗಳೇ ತಾಜಮಹಲು....ಆಗ್ರಾದಲ್ಲಿ ಇರುವುದೆಂದು ಚರಿತ್ರೆ ಮೇಸ್ಟ್ರು ಚಿಕ್ಕಣ್ಣನವರು ಹೇಳಿದ್ದರು. ಅಲ್ಲಿಗೆ ಹೋದರೆ ಲಂಡನ್ನು ಬೇಡವೆ ?"

—ಎಂದು ಯೋಚಿಸಿ ಯೋಚಿಸಿ ವೆಂಕಟಿಯನ್ನು ಬಿಟ್ಟು ಬಂದ ಸಂಕಟದಿಂದಲೇ ಹೇಳಿದ. ಈ ಮಾತಿಗೆ ಆ AII ನೌಕರ ಕೆಕ್ಕರಿಸಿ ನಕ್ಕು ನೆತ್ತಿಗೆ ಉಸಿರು ಸಿಕ್ಕಿಸಿಕೊಂಡು ವದ್ಯಾಡಿ ಕೆಮ್ಮಿನಲ್ಲಿ ನಗುವನ್ನು ಮುಕ್ತಾಯ ಮಾಡಿ ಕಣ್ಣಲ್ಲಿ ನೀರು ತಂದುಕೊಂಡ.

"ಸ್ವಾಮೀ ತಾಜಮಹಲೆಂಬ ಹೋಟಲು ನಮ್ಮ ಪ್ರಯಾಣಿಕರನ್ನು ಅಲ್ಲೇ ಇಳಿಸೋದು ಆಗ್ರಾದ ಗೋರಿಯಲ್ಲ"—ಎಂದ ಅವ.

"ಓಹೋಹೊ—ಇಲ್ಲಿಯದೇ ಗೋರಿಯೋ ಅದು – ಹಾಗಾದರೆ ಬೇಡ ಬೇಡ ಇಲ್ಲಿಯೇ ಯಾವುದೋ ರೂಮೆಂದಿರಲ್ಲಾ ಅಲ್ಲೇ ನಮ್ಮ ಬಿಡಾರ ಮಾಡುವ...."

"ಹಾಗಾದರೆ ಸರಿ....ಇಲ್ಲಿ ನೋಡಿ—ಈ ಕಾರ್ಡು ಕೊಳ್ಳಿ—ಇದನ್ನು ತೋರಿಸಿದರೆ ಮಹಡಿಯ ಮೇಲಿನ ರೆಸ್ಟೋರೆಂಟಿನಲ್ಲಿ ತಿಂಡಿ ಚಹಾ ಕೊಡುವರು. ರಾತ್ರಿ ಹನ್ನೊಂದುವರೆಗೆ 'ಅಯ್ಯೋಧ್ಯಾ ರಾಣಿ' ಹೊರಡುತ್ತಾಳೆ....ಅದಕ್ಕೆ ಮುಂಚೆ ಊಟ ಮುಗಿಸಿಬಿಡಿ ಶಿಷ್ಯರ ಸಮೇತ ಹೊರಡಲು ತಯಾರಾಗಿರಿ...."

"ಕ್ಷಮಿಸಬೇಕು ಎಲ್ಲೋ ತಪ್ಪಾಗಿದೆ"

"ಏನು ತಪ್ಪು ನಾನು ಹೇಳಿದ್ದರಲ್ಲಿ?"

"ಅಯೋಧ್ಯಾರಾಣಿ ಹೋದರೆ ನಾವೇಕೆ ಅವಳ ಜೊತೆ ವನವಾಸಕ್ಕೆ ಹೋಗಬೇಕು?" ಗುರು ಗಾಂಪವಾಣಿ

"ಹಹ್ಹ...."ಅಯೋಧ್ಯಾ ರಾಣಿ "ಅನ್ನೋದು ಇವತ್ತು ರಾತ್ರಿ ಲಂಡನ್ನಿಗೆ ಹೋಗೋ ವಾಯು ಜಹಜು—ಅರ್ಥಾತ್ ಕಾನ್ಸ್ಟಲೇಷನ್ ಅನ್ನೋ ನಾಲ್ಕು ಎಂಜಿನ್ನಿನ ಭಾರೀ ವಿಮಾನ—ರಾಣಿ ಆಫ್ ಚಿತ್ತೂರ್ ರಾಣಿ ಆಫ್ ಅಜಂತ—ಹೀಗೆನಮ್ಮ ವಿಮಾನಗಳಿಗೆ ಒಬ್ಬೊಬ್ಬ ಹೆಸರಾಂತ ರಾಣಿಯರ ಹೆಸರಿಟ್ಟಿದ್ದೇವೆ ಅಷ್ಟೆ"

"ಸರಿ ಸರಿ ...ಹಾಗೋ ವಿಷಯ....ಹಾಗಾದರೇ ನಮಗೆ ದಾರಿ ತೋರಿಸ್ತೀರಾ"

"ಕೊಳ್ಳಿ ಈ ಕಾರ್ಡುಗಳನ್ನ....ನಿಮ್ಮ ಈ ಸಾಮಾನು ಬೇಕಾದರೆ ನಮ್ಮ ವಶದಲ್ಲೇ ಇರಲಿ—ವಿಮಾನ ಹತ್ತುವ ಮುಂಚೆ ತೂಗಿ ಸಾಗಿಸುತ್ತೇವೆ ..."

"ಮಂಕಾ ಮರುಳನೆಲ್ಲಿ—"ಎಂದೆನ್ನುತ್ತಿದ್ದಂತೆ, ಹಳೆಯ ರೋಡ್ ರೋಲರ್ ಗಾಲಿಯನ್ನು ತಿರುವಿದ ಸದ್ದಾಯಿತು—ಅದರ ಜೊತೆಗೇ ಕಾಡುಹಂದಿ ಕೇಕೇ ಶಬ್ದ ಬಂತು. ಏನೆಂದು ಚಕಿತರಾಗಿ ನೋಡಿದಾಗ ಅದು ಮೊಸಾಯಿಕ ನೆಲದ ಮೇಲೆ ಮಲಗಿದ ಮರುಳನ ಗೊರಕೆ ಎಂದು ತಿಳಿಯಿತು. ಮಂಕ ಅವನನ್ನು ಒದ್ದು ಎಬ್ಬಿಸಿದ. ಮಡೆಯ ಎಲ್ಲೀ ಎಂದು ಹುಡುಕಿದಾಗ ಮುಠ್ಠಾಳನ ಕೈಗೆ ಬೆಪ್ಪನಂತೆ ಲೌಂಜಿನಲ್ಲಿ ಲಾ ಮಾಡುತ್ತಿದ್ದ ಪಿರಂಗಿಯವರನ್ನ ನೋಡುತ್ತಿದ್ದಂತೆ ಸಿಕ್ಕುಬಿದ್ದ. ಎಲ್ಲರನ್ನೂ ಕಲೆ ಹಾಕಿ ಕೇವಲ ಹಳದಿ ಢಮಾರ್ ಟ್ರಂಕನ್ನು ಮಾತ್ರ ಹೊತ್ತು ಆ AII ಆಳಿನ ಹಿಂದೆ ಹೊರಟಿತು ಈ ಗಾಂಪರ ಗುಂಪು.

ಅವರನ್ನು ಕರೆದೊಯ್ದು ಗೋಡೆ ಹತ್ತಿರ ನಿಲ್ಲಿಸಿ ಗುಂಡಿ ಅದುಮಿದ. ಸುಂಯ್ ಎಂದು ಡಬ್ಬಿ ಮೇಲಿಂದ ಬಂತು. ಬಾಗಿಲು ತೆಗೆಯಿತು. ಎಲ್ಲರೂ ಒಳಗೆ ಬರುವಂತೆ ಹೇಳಿದ ಆ ಆಳು.

" ಇದೇನು ಗುರುಗಳೇ "

"ಇದು ಚಿಕ್ಕ ಹೋಟಲಿರಬೇಕು ನಡಿಯಿರಿ"

—ಎಂದು ಆ ಗವಿ ಹೊಕ್ಕರು. ಇದ್ದಕ್ಕಿದ್ದಂತೆ ಬಾಗಿಲಿಕ್ಕಿತು. ಸರ್ರನೆ ಆ ಡಬ್ಬಿ ಮೇಲೇರತೊಡಗಿತು. "ಅಯ್ಯಯ್ಯೋ....ಯಪ್ಪೋ—ವೆಂಕಟಲಕ್ಷ್ಮೀ" ಎಂದು ಕೂಗಿದ ಮಂಕ. ಆ ವಿದ್ಯುತ್ ಲಿಫ್ಟ್ (Lift) ನ್ನ ನಡೆಸುವವ ಥಕ್ಕನೆ ನಿಲ್ಲಿಸಿದ. ಮೇಲೂ ಕೆಳಗೂ ಅಲ್ಲದೆ ಅಂತರಪಿಶಾಚಿಯಂತೆ ಅವನು ಏನಾಯಿತೋ ಸರ್ರನೆ ಕೆಳಗೆ ಇಳಿಸತೊಡಗಿದ.

"ಇದೇನಪ್ಪೋ....ಗುರುಗಳೇ ನಾನು ವಲ್ಲೆ—ನಮ್ಮ ಮಠಕ್ಕೆ ಹೋಗೋಣ. ಈ ಲಂಡನ್ನ ನಾನು ವಲ್ಲೇ"—ಎಂದು ಮಂಕ ಮತ್ತೆ ಅತ್ತ. ಮರುಳ ಆ ಲಿಫ್ಟಿನಲ್ಲೇ ಮಲಗಿದ್ದ. ಅವನ ಮೇಲೆ ದಣಿದ ಗುರುಗಳು ಕೂತಿದ್ದರು. ಅವರಿಗೆ ಘಡೆಯ ಹ್ಯಾಟನಿಂದ ಗಾಳಿ ಹಾಕುತ್ತಿದ್ದ.

"ಆಪ್ ಉಪ್ಪರ್ ನಹಿಜಾತೆ ?"

—ಎಂದ ಅವನು. ಗಾಂಪರೊಡೆಯರು "ಉತ್ತಮೇ ಶಿಖರೇ ಜಾತೆ"—ಎಂದು ಅಂದುಬಿಟ್ಟರು. ಆ ಲಿಫ್ಟಿನ ಆಳಿಗೆ ಅರ್ಥವಾಗಲಿಲ್ಲ.

"ಕಿದರ್ ಸೆ ಆಯ"—ಎಂದ.

"ಆಯಾತೊ ವರದಾದೇವಿ"—ಎಂದು ಸಂಧ್ಯಾವಂದನೆ ಮಂತ್ರದ ತುಕಡಿ ಹೇಳಿದರು.

"ಠೀಕ್"—ಎಂದು ಏನು ಅರ್ಥವಾಯಿತೋ ಅವನು ಎಲ್ಲೂ ನಿಲ್ಲಿಸದೆ ಲಿಫ್ಟನ್ನು ಆರನೇ ಮಹಡಿಗೆ ತಂದು ನಿಲ್ಲಿಸಿದ. ಬಾಗಿಲು ತೆಗೆದು, ಅಲ್ಲೆ ಇದ್ದ ಇವರಿಗಾಗಿ ಸಿದ್ಧವಾದ ಸುಸಜ್ಜಿತ ಕೊಠಡಿ ತೋರಿಸಿ "ಸಲಾಂ" ಹೊಡೆದ. ಗುರುಗಳು ಅವನಿಗೆ ಆಶೀರ್ವಾದದ ಭಕ್ಷೀಸ್ ಕೊಟ್ಟರು.

ಮಂಕ-ಮರುಳ-ಮುಠ್ಠಾಳ-ಮಡೆಯ-ಮಡ್ಡಿಗಳು ಆ ರೂಮನ್ನು ನೋಡಿದರು—ಸೊಗಸಾದ ಸೋಫ-ಚಪ್ಪರದ ಪಲ್ಲಂಗ-ಕನ್ನಡಿ-ನೀರುನಲ್ಲಿ-ರತ್ನಗಂಬಳಿ-ಮೇಲೆ ತಿರುಗುತ್ತಿದ್ದ ಫಂಕ! ಇಂತಹ ರೂಮನ್ನು ಅವರು ಕಂಡಿರಲಿಲ್ಲ. "ಗುರುಗಳೇ ಅದು ನೋಡಿ-ಇದು ನೋಡಿ ಅಯ್ಯೋ-ಎಷ್ಟು ಆರಾಮಾಗಿದೆ, ಇದನ್ನೆ ನಮ್ಮ ಮಠ ಮಾಡಿಬಿಡೋಣ"—ಎಂದ ಮರುಳ. ಗುರುಗಳು ಗುಂ ಆಗಿದ್ದರು.

"ರಾಮರಾಮ"—ಎಂದು ಗುರುಗಳು ಚಪ್ಪರಪಲ್ಲಂಗದ ಕೆಳಗೆ ಮಲಗಿದರು. ಮರುಳ ರತ್ನಗಂಬಳಿ ಮೇಲೆ ಮಲಗಿದ. ಮಡ್ಡಿ ನಲ್ಲಿನೀರಿನಲ್ಲಿ ಆಚಮನ ಮಾಡಿದ. ದಣಿದ ಎಲ್ಲರನ್ನೂ ನಿದ್ರಾದೇವಿ ಆವರಿಸಿಬಿಟ್ಟಳು.

'ಅಯೋಧ್ಯಾರಾಣಿ' ಹೊರಡುವ ಹೊತ್ತಿಗೆ ಎದ್ದರೆ?—ಅವರು ಊಟ ಮಾಡಿದರೆ?—ಚಹಾ ಕುಡಿದರೆ?—ಎಂದು ವಾಚಕ ಮಹಾಶಯರು ಯೋಚಿಸಿರಬಹುದು. ಅದರ ವಿಚಾರ ಮುಂದಿನ ತಿಂಗಳ 'ಕೊರವಂಜಿ' ಕೊಂಡು ಓದಿ.

—ದಾಶರಥಿ ದೀಕ್ಷಿತ್.


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO BANGALORE MADRAS MADURAI BOMBAY

Printed by B. S. Iyengar, Bangalore City.
Publisher—B. N. Gupta. Editor—M. Sivaram.